# ಕನ್ನಡ



# ಸುಗಮಭಾರತಿ

## ಏಳನೆಯ ಇಯತ್ತೆ





ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ - 2116/(ಪ್ರ.ಕ. 43/16) ಎಸ್‌ಡಿ-4 ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯ ದಿ. 3.3.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ನಿರ್ಧಾರಿತ ಗೊಳಿಸಲಾಗಿದೆ.

# ಕನ್ನಡ

# ಸುಗಮಭಾರತಿ

## ಏಳನೆಯ ಇಯತ್ತೆ



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

ಬದಿಯಲ್ಲಿಯ 'ಕ್ಯೂಆರ್. ಕೋಡ' ಆದರಂತೆ ಪರಿವಿಡಿಯಲ್ಲಿ ಕೊಡಲಾದ 'ಕ್ಯೂಆರ್. ಕೋಡ'ಗಳನ್ನು ಸ್ಮಾರ್ಟಫೋನ ಬಳಸಿ ಸ್ಕ್ಯಾನ ಮಾಡಲು ಬರುವುದು. ಸ್ಕ್ಯಾನ ಮಾಡಿದ ನಂತರ ನಮಗೆ ಈ ಪಠ್ಯಪುಸ್ತಕದ ಅಧ್ಯಯನ-ಅಧ್ಯಾಪನೆಗಾಗಿ ಉಪಯುಕ್ತ ಲಿಂಕ/ಲಿಂಕ್ಸ್ (URL) ಸಿಗುವವು.

**ಪ್ರಥಮಾವೃತ್ತಿ : 2017**

**ಕನ್ನಡ ಭಾಷಾ ಸಮಿತಿ :**
ಡಾ. ಕೆ.ಕೆ. ಪತ್ತಾರ, ಅಧ್ಯಕ್ಷರು
ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯರು
ಶ್ರೀ. ಬಿ.ಎಸ್. ಕಾಪಸೆ, ಸದಸ್ಯರು
ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯರು
ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆಯರು
ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ- ಸಚಿವ

**ಕನ್ನಡ ಅಭ್ಯಾಸಗಟ ಸದಸ್ಯರು :**
ಶ್ರೀ. ಶ್ರೀಶೈಲ ಜಿ. ಅವಟಿ
ಶ್ರಿ. ಜಿ. ಡಿ. ಮೋರೆ
ಶ್ರೀ. ಟಿ. ವ್ಹಿ. ಸದಾನಂದ

**ಸಂಯೋಜನ ಪ್ರಮುಖರು :**
ಡಾ. ಸದಾನಂದ ಎಂ ಬಿಳ್ಳೂರ,
ವಿಶೇಷಾಧಿಕಾರಿಗಳು ಕನ್ನಡ,
ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ-4
ಶ್ರೀ. ಆರ್. ಎಮ್. ಗಣಾಚಾರಿ, ವಿಷಯ ಸಹಾಯಕರು ಕನ್ನಡ, ಬಾಲಭಾರತಿ, ಪುಣೆ-4.

**ಚಿತ್ರಕಾರ :**
ಶ್ರೀ. ರಾಜೇಂದ್ರ ಗಿರಿಧಾರಿ

**ಮುಖಪುಟ :**
ಶ್ರೀ. ರಾಜೇಂದ್ರ ಗಿರಿಧಾರಿ

**ಅಕ್ಷರ ಜೋಡಣೆ :**
ಕೇಸನ್ ಲ್ಯಾಂಗ್ವೇಜ್ ಬ್ಯೂರೋ

**ನಿರ್ಮಿತಿ :**
ಶ್ರೀ. ಸಚ್ಚಿತಾನಂದ ಆಫಳೆ. ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಸಂದೀಪ ಅಜಗಾಂವಕರ, ನಿರ್ಮಿತಿ ಅಧಿಕಾರಿ

**ಕಾಗದ :**
70 ಜಿ. ಎಸ್. ಎಮ್. ಕ್ರೀಮ್‌ವೋವ್ಹ್

**ಮುದ್ರಣಾದೇಶ :** N/PB/2017-18/QTY 1000

**ಮುದ್ರಕರು :**M/S RUNA GRAPHICS, PUNE

**ಪ್ರಕಾಶಕ :**
ಶ್ರೀ. ವಿವೇಕ ಗೋಸಾವಿ, ನಿಯಂತ್ರಕ,
ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ,
ಮುಂಬಯಿ - 25.

**© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4**

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

## ಪ್ರಸ್ತಾವನೆ

ಪ್ರೀತಿಯ ವಿದ್ಯಾರ್ಥಿ ಮಿತ್ರರೇ,

ತಮಗೆಲ್ಲರಿಗೂ ಏಳನೆಯ ಇಯತ್ತೆಯ ವರ್ಗದಲ್ಲಿ ಸ್ವಾಗತವಿದೆ. ಈ ಹಿಂದಿನ ವರ್ಗದಲ್ಲಿ ಕನ್ನಡ ಸುಗಮಭಾರತಿ ಈ ಪಠ್ಯಪುಸ್ತಕವನ್ನು ನೀವು ಅಭ್ಯಸಿಸಿದ್ದೀರಿ. ಏಳನೆಯ ಸುಗಮಭಾರತಿ ಈ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ಆನಂದವಾಗುತ್ತದೆ.

ಗೆಳೆಯರೇ, ಕನ್ನಡವು ನಮ್ಮ ಮಾತೃಭಾಷೆ ಇದೆ. ಇಂಗ್ಲಿಷ ಮತ್ತು ಮರಾಠಿ ಭಾಷೆಯ ಹೊರತು ಕನ್ನಡ ಭಾಷೆಯಲ್ಲಿ ಬರೆಯಲು, ಓದಲು, ಸಂವಾದಿಸಲು, ಪತ್ರವ್ಯವಹಾರ ಮಾಡಲು, ಶಬ್ದ ಸಂಪತ್ತು ಕೂಡ ಚೆನ್ನಾಗಿರಬೇಕು. ಈ ಪಠ್ಯಪುಸ್ತಕದಲ್ಲಿಯ ಕಥೆ, ಸಂವಾದ, ಪಾಠ, ಕವಿತೆ, ಗೀತೆಗಳನ್ನು ಓದಿ ನಿಮಗೆ ಹೊಸ ಹೊಸ ಶಬ್ದಗಳನ್ನು ಕಲಿಯಲು ಸಿಗುವದಿದೆ. ಈ ಪುಸ್ತಕವನ್ನು ಓದಿ ನಿಮಗೆ ಕನ್ನಡ ಭಾಷೆಯ ಅಭಿರುಚಿ ಹೆಚ್ಚಾಗಬಹುದು ಎಂದು ನಮಗೆ ಅನಿಸುತ್ತದೆ.

ಪಠ್ಯಪುಸ್ತಕದಲ್ಲಿ ಭಾಷಾ ಕೌಶಲ್ಯ ಹೆಚ್ಚೆಚ್ಚು ವಿಕಾಸ ಮಾಡುವ ದೃಷ್ಟಿಯಿಂದ ಹೊಸ ಸ್ವಾಧ್ಯಾಯ, ಉಪಕ್ರಮ, ಪ್ರಕಲ್ಪವನ್ನು ಕೊಡಲಾಗಿದೆ. ಹಾಗೆಯೇ ಒಂದೇ ವಾಕ್ಯದಲ್ಲಿ ಉತ್ತರಬರುವಂತಹ ಪ್ರಶ್ನೆಗಳನ್ನು ತಯಾರಿಸಿ ಉತ್ತರ ಬರೆಯುವದು, ಕೊಟ್ಟ ಅಕ್ಷರ ಸಮೂಹದಲ್ಲಿಯ ಅರ್ಥಪೂರ್ಣ 'ಶಬ್ದವನ್ನು ತಯಾರಿಸೋಣ', ಶಬ್ದಕೋಷದ ಸಹಾಯದಿಂದ 'ಸಂದರ್ಭ ಅರ್ಥ ಶೋಧಿಸೋಣ' ಮುಂತಾದ ಈ ವೈವಿಧ್ಯ ಪೂರ್ಣವಾದ ಶೀರ್ಷಿಕೆಯಲ್ಲಿ ಕೊಟ್ಟ ವಿಷಯ ಮತ್ತು ಕೃತಿಯಿಂದ ನಿಮ್ಮಲ್ಲಿಯ ಭಾಷಾ ಕೌಶಲ್ಯಗಳ ವಿಕಾಸದ ಜೊತೆಗೆ ನಿರೀಕ್ಷಣೆ ಕ್ಷಮತೆ, ವಿಚಾರ ಕ್ಷಮತೆ ಮತ್ತು ಕೃತಿಶೀಲತೆ ಇವುಗಳಿಗೆ ಅವಕಾಶ ದೊರುವದಿದೆ.

ಕನ್ನಡ ಭಾಷೆಯನ್ನು ಕಲಿಯುವ ಪ್ರಕ್ರಿಯೆಯು ಆನಂದದಾಯಕವಾಗಬೇಕು ಮತ್ತು ಸ್ವಯಂ ಅಧ್ಯಯನಕ್ಕೆ ಚಾಲನೆ ದೊರಕಬೇಕೆಂಬ ದೃಷ್ಟಿಯಿಂದ ಈ ಪಠ್ಯಪುಸ್ತಕವನ್ನು ಪರಿಪೂರ್ಣಗೊಳಿಸುವ ಪ್ರಯತ್ನ ಮಾಡಲಾಗಿದೆ. ಕನ್ನಡ ಸುಗಮಭಾರತಿ ಏಳನೆಯ ಇಯತ್ತೆಯ ಈ ಪಠ್ಯಪುಸ್ತಕವು ನಿಮ್ಮೆಲ್ಲರಿಗೂ ನಿಶ್ಚಿತವಾಗಿ ಹಿಡಿಸಬಹುದೆಂಬ ಆಸೆ ಇದೆ.

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ
ದಿನಾಂಕ: 28 ಮಾರ್ಚ್ 2017
ಭಾರತೀಯ ಸೌರ : 7 ಚೈತ್ರ 1939.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

## ಕನ್ನಡ ಸುಗಮಭಾರತಿ : ಏಳನೆಯ ಇಯತ್ತೆ

| ಕ್ಷೇತ್ರಗಳು | ಕ್ಷಮತೆಗಳು |
|---|---|
| ಶ್ರವಣ | 1. ಶಾಲೆ ಹಾಗೂ ಶಾಲಾಬಾಹ್ಯ ಪರಿಸರದಲ್ಲಿ ಹಾಡು, ಕಥೆ, ಕವಿತೆ, ಸಂವಾದ ಚರ್ಚೆ ಮುಂತಾದವುಗಳನ್ನು ಲಕ್ಷ್ಯಪೂರ್ವಕವಾಗಿ ತಿಳಿದುಕೊಂಡು ಆಲಿಸುವುದು.<br>2. ಆಲಿಸಿದ ವಿಷಯದ ಕುರಿತಾಗಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು.<br>3. ದೂರದರ್ಶನದ, ಆಕಾಶವಾಣಿಯ ವಾರ್ತೆಗಳನ್ನು, ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೇಳುವುದು.<br>4. ಮೌಖಿಕ ಸೂಚನೆ, ಆಜ್ಞೆ, ವಿನಂತಿ, ಪ್ರಶ್ನೆ ಇತ್ಯಾದಿಗಳ ಅರ್ಥ ತಿಳಿದುಕೊಂಡು ಕೇಳುವುದು.<br>5. ಶಾಲೆಯ ವಿಶಿಷ್ಟ ಪ್ರಸಂಗಗಳಲ್ಲಿ ನೀಡಿದ ಸೂಚನೆ, ಆಜ್ಞೆ, ವಿನಂತಿ ಮತ್ತು ಕೇಳಿದ ಪ್ರಶ್ನೆಗಳಿಗೆ ಸ್ಪಂದಿಸುವುದು. |
| ಭಾಷಣ ಸಂಭಾಷಣ | 1. ಕೇಳಿದ, ನೋಡಿದ ಹಾಗೂ ಓದಿದ ವಿಷಯ ಕುರಿತು ಮೌಖಿಕವಾಗಿ ಹೇಳುವುದು.<br>2. ತಮ್ಮ ಅನುಭವ ಕಲ್ಪನೆ ಭಾವನೆ ಮತ್ತು ವಿಚಾರಗಳನ್ನು ಸ್ಪಷ್ಟವಾಗಿ, ಆತ್ಮವಿಶ್ವಾಸದಿಂದ ವ್ಯಕ್ತಪಡಿಸುವುದು.<br>3. ಸಂವಾದ/ಚರ್ಚೆಗಳಲ್ಲಿ ಪಾಲ್ಗೊಂಡು ಸುಸಂಗತವಾಗಿ ಮಾತನಾಡುವುದು.<br>4. ಕೇಳಿದ ಪ್ರಶ್ನೆಗಳಿಗೆ ಯೋಗ್ಯ ಉತ್ತರಗಳನ್ನು ಕೊಡುವುದು. |
| ವಾಚನ | 1. ಹಾಡು, ಕವಿತೆ, ಕಥೆ ನಾಟ್ಯಪ್ರಸಂಗ ಅಲ್ಲದೆ ವೃತ್ತಪತ್ರಿಕೆ, ಭಿತ್ತಿಪತ್ರಿಕೆಗಳಲ್ಲಿಯ ವಿವರಗಳ ಪ್ರಕಟವಾಚನ ಮಾಡುವುದು<br>2. ಪಠ್ಯ ಹಾಗೂ ಪಠ್ಯೇತರ ಪುಸ್ತಕಗಳಲ್ಲಿಯ ಮುದ್ರಿತ ಹಾಗೂ ಹಸ್ತಲಿಖಿತ ವಿವರಗಳನ್ನು ತಿಳಿದುಕೊಂಡು ಪ್ರಕಟವಾಚನ ಮಾಡುವುದು.<br>3. ಆಯ್ದ ಲೇಖನ ಭಾಗಗಳ ಅರ್ಥ ತಿಳಿದುಕೊಂಡು ಪ್ರಕಟವಾಚನವನ್ನು ನಿರ್ದಿಷ್ಟ ವೇಳೆಯಲ್ಲಿ ಏಕಾಗ್ರತೆಯಿಂದ ಮಾಡುವುದು, ಕ್ರಮವಾಗಿ ವಾಚನದ ಗತಿಯನ್ನು ಹೆಚ್ಚಿಸಿಕೊಳ್ಳುವುದು. |
| ಲೇಖನ | 1. ಪಠ್ಯ ಹಾಗೂ ಪಠ್ಯೇತರ ಆಯ್ದ ವಿಶಿಷ್ಟ ಭಾಗದ ಅನುಲೇಖನ ಮಾಡುವುದು.<br>2. ಲೇಖನದ ನಿಯಮಗಳನ್ನು ತಿಳಿದುಕೊಂಡು ಶ್ರುತಲೇಖನ ಮಾಡುವುದು. ಆಗುವ ತಪ್ಪುಗಳ ಕಡೆಗೆ ವಿಶೇಷ ಲಕ್ಷ್ಯವಹಿಸಿ ತಪ್ಪುಗಳನ್ನು ಕೂಡಲೇ ತಿದ್ದಿಕೊಳ್ಳಲು ಪ್ರಯತ್ನಿಸುವುದು.<br>3. ಸುಂದರ ಹಾಗೂ ಶುದ್ಧಬರಹ ಕಲೆಯನ್ನು ಮೈಗೂಡಿಸಿಕೊಳ್ಳುವುದು.<br>4. ಆಲಿಸಿದ ಹಾಗೂ ಓದಿದ ಭಾಗದ ಮೇಲೆ ಕೇಳಿದ ಪ್ರಶ್ನೆಗಳಿಗೆ ಸ್ವತ: ಉತ್ತರಗಳನ್ನು ಬರೆಯುವುದು.<br>5. ಎಂಟರಿಂದ ಹತ್ತು ಸಾಲುಗಳವರೆಗೆ ತಮ್ಮ ವಿಚಾರ, ಭಾವನೆ ಮತ್ತು ಕಲ್ಪನೆಗಳನ್ನು ಬರೆಯಲು ಬರುವುದು.<br>6. ಸುಂದರ ಹಾಗೂ ಶುದ್ಧ ನಿಬಂಧಾತ್ಮಕ ಲೇಖನ ಬರೆಯುವುದು. ಸ್ವಯಂಲೇಖನ ಮಾಡುವುದು. |
| ಅಧ್ಯಯನ ಕೌಶಲಗಳು | 1. ಹೊಸ ಶಬ್ದ, ವಾಕ್ಯರಚನೆ ಅಲ್ಲದೆ ಹೊಸ ವಿಷಯಗಳ ಕುರಿತು ಆಕಲನ ಮಾಡಿಕೊಳ್ಳುವುದು.<br>2. ಕೇಳಿ ತಿಳಿದುಕೊಂಡ ವಿಷಯಗಳ ಕುರಿತು ವಿವರಣೆ ಮಾಡುವುದು.<br>3. ಚರ್ಚೆ/ಸಂವಾದಗಳಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು.<br>4. ಅಪೇಕ್ಷಿತ ಕೃತಿಗಳನ್ನು ನಿರ್ದಿಷ್ಟ ಸಮಯದಲ್ಲಿ ಮಾಡುವ ಕೌಶಲವನ್ನು ಬೆಳೆಸಿಕೊಳ್ಳುವುದು.<br>5. ಸ್ಪಷ್ಟ ಉಚ್ಚಾರ ಹಾಗೂ ಯೋಗ್ಯ ಧ್ವನಿಯ ಏರಿಳಿತದೊಂದಿಗೆ ಪಠ್ಯೇತರ ಹಾಡು, ಕವಿತೆಗಳನ್ನು ಹಾಡು ಕಥೆಗಳನ್ನು ಹೇಳುವುದು.<br>6. ಪಠ್ಯ ಹಾಗೂ ಪಠ್ಯೇತರ ಹಾಡು, ಕವಿತೆಗಳನ್ನು, ರಾಗ, ತಾಳ ಮತ್ತು ಲಯದೊಂದಿಗೆ ಹಾಡುವುದು, ಹಸ್ತ ಹಾಗೂ ಮುದ್ರಿತ ವಿವರಗಳನ್ನು ಯೋಗ್ಯ ಉಚ್ಚಾರದೊಂದಿಗೆ ಓದುವುದು.<br>7. ಪ್ರಕಟವಾಚನದ ಹಾಗೂ ಮೌನವಾಚನದ ಗತಿಯನ್ನು ಹೆಚ್ಚಿಸಿಕೊಳ್ಳುವುದು. ಶ್ರುತಲೇಖನದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವುದು.<br>8. ತನಗೆ ಬೇಕಾದ ಮಾಹಿತಿಯನ್ನು ಇಂಟರ್‌ನೆಟ್‌ದ ಮೇಲೆ ಶೋಧಿಸಲು ಬರುವುದು.<br>9. ಇಂಟರ್‌ನೆಟ್‌ದ ಮೇಲೆ ಉಪಲಬ್ಧವಿರುವ ಶಬ್ದಕೋಶಗಳನ್ನು ಉಪಯೋಗಿಸಲು ಬರುವುದು.<br>10. ಸಂಕೇತ ಸ್ಥಳಗಳ ರಚನೆಯ ಬಗ್ಗೆ ತಿಳಿದುಕೊಂಡು ಅದರಲ್ಲಿಯ ವಿವಿಧ ವಿಷಯಗಳನ್ನು ಇದ್ದಕ್ಕಿದ್ದಂತೆ ಉಪಯೋಗಿಸಲು ಬರುವುದು. |

# ಪರಿವಿಡಿ

## ಗದ್ಯ ವಿಭಾಗ


| ಅ.ನಂ. | ಪಾಠದ ಹೆಸರು | ಲೇಖಕರು | ಪುಟ ಸಂಖ್ಯೆ |
|---|---|---|---|
| 1. | ಕೃಷ್ಣಾನದಿ | – | 1 |
| 2. | ರಾಮಕೃಷ್ಣನ ಜಾಣತನ | – | 4 |
| 3. | ಶಿಕ್ಷಕರ ದಿನಾಚರಣೆ | – | 7 |
| 4. | ವ್ಯಾಪಾರಿಯ ಚತುರತೆ | ಜಿ. ಮಂಗಳ | 11 |
| 5. | ಧ್ವನಿ ಪ್ರದೂಷಣೆ | – | 15 |
| 6. | ಗಾನಯೋಗಿ | – | 18 |
| 7. | ಶ್ಯಾಮನ ತಾಯಿ | ಸಾನೇ ಗುರೂಜಿ | 22 |


## ಪದ್ಯ ವಿಭಾಗ


| ಅ.ನಂ. | ಕವಿತೆಯ ಹೆಸರು | ಕವಿಗಳು | ಪುಟ ಸಂಖ್ಯೆ |
|---|---|---|---|
| 1. | ಯಾವುದು ಇಷ್ಟ? | – | 25 |
| 2. | ಇಳೆಗೆ ಬಂತು ಮಳೆ | ಪ.ಗು. ಸಿದ್ದಾಪುರ | 29 |
| 3. | ಕಾಡು | ಬಿ. ತಿಪ್ಪೇರುದ್ರಪ್ಪ | 32 |
| 4. | ಯಾರು ನಮ್ಮ ದೇವರು | ಆರ್. ಸರಸ್ವತಿ | 35 |


## ವ್ಯಾಕರಣ ವಿಭಾಗ


| | | |
|---|---|---|
| ★ ಕ್ರಿಯಾಪದ | ____________ | 37 |
| ★ ಕಾಲಗಳು | ____________ | 37 |
| ★ ವಿಭಕ್ತಿ ಪ್ರತ್ಯಯ | ____________ | 38 |

# 1. ಕೃಷ್ಣಾನದಿ

ಮಕ್ಕಳೆ,

ನಾನು ಕೃಷ್ಣಾನದಿ. ಮಹಾರಾಷ್ಟ್ರದ ಸಹ್ಯಾದ್ರಿಯ ಬೆಟ್ಟಗಳಲ್ಲಿ ಮಹಾಬಳೇಶ್ವರ ಎಂಬ ತಂಪು ಹವೆಯ ಸ್ಥಳವಿದೆ. ಅಲ್ಲಿಯೇ ನಾನು ಜನ್ಮ ತಾಳಿದೆ. ಅಲ್ಲಿಂದ ಕುಣಿಯುತ್ತ, ಮಣಿಯುತ್ತ, ಜುಳು ಜುಳು ಶಬ್ದ ಮಾಡುತ್ತ ನಾನು ಹರಿಯುತ್ತೇನೆ.

ದೂಧಗಂಗಾ, ವರುಣಾ, ಕೊಯನಾ, ಮಲಪ್ರಭಾ, ಘಟಪ್ರಭಾ, ಭೀಮಾ, ತುಂಗಭದ್ರಾ ಮುಂತಾದ ನದಿಗಳು ಬಂದು ನನ್ನನ್ನು ಸೇರುತ್ತವೆ. ಆಗ ನಾನು ಬೃಹದಾಕಾರವಾಗಿ ಕಾಣುತ್ತೇನೆ. ಥಳಥಳಿಸುತ್ತ, ಕಲಕಲ ನಾದ ಮಾಡುತ್ತ ಸಾಗುತ್ತೇನೆ. ಕರ್ನಾಟಕ ಹಾಗೂ ಆಂಧ್ರಪ್ರದೇಶಗಳಲ್ಲಿ ಹರಿಯುತ್ತೇನೆ. ಕೊನೆಗೆ ನಾನು ಬಂಗಾಲ ಉಪಸಾಗರವನ್ನು ಸೇರುತ್ತೇನೆ.

ಮುದ್ದು ಮಕ್ಕಳೆ, ನಾನು ಕಪ್ಪು ಮಣ್ಣಿನ ಪ್ರದೇಶದಲ್ಲಿ ಹರಿಯುತ್ತೇನೆ. ಕೃಷ್ಣ ಎಂದರೆ ಕಪ್ಪು. ಅದಕ್ಕಾಗಿ ನನಗೆ ಈ ಹೆಸರು ಬಂದಿದೆ.

ನನ್ನ ದಂಡೆಯ ಮೇಲೆ ಅನೇಕ ಪುಣ್ಯಕ್ಷೇತ್ರಗಳಿವೆ. ಮಹಾರಾಷ್ಟ್ರದ ವಾಯಿ, ನರಸಿಂಹವಾಡಿಗಳಲ್ಲಿ ದತ್ತಾತ್ರೇಯನ ಮಂದಿರಗಳಿವೆ. ಕರ್ನಾಟಕದಲ್ಲಿ ನಾನು ಹರಿಯುವಾಗ ಮಲಪ್ರಭೆಯು ನನ್ನನ್ನು ಸೇರುತ್ತಾಳೆ. ಅದುವೇ ಪವಿತ್ರ ಕೂಡಲ ಸಂಗಮವೆಂದು ಪ್ರಸಿದ್ಧವಾಗಿದೆ. ಆಂಧ್ರಪ್ರದೇಶದಲ್ಲಿ ಶ್ರೀಶೈಲ ಎಂಬ ಪ್ರಸಿದ್ಧ ಕ್ಷೇತ್ರವಿದೆ. ಅಲ್ಲಿ ಮಲ್ಲಿಕಾರ್ಜುನನ ದೇವಾಲಯವಿದೆ.



ಬಾಲಕರೆ, ನನ್ನನ್ನು ಅಲ್ಲಲ್ಲಿ ತಡೆಗಟ್ಟಿ ಜಲಾಶಯಗಳನ್ನು ಕಟ್ಟಿದ್ದಾರೆ, ಕರ್ನಾಟಕದಲ್ಲಿ ಆಲಮಟ್ಟಿ, ಆಂಧ್ರಪ್ರದೇಶದಲ್ಲಿನಾಗಾರ್ಜುನಸಾಗರ ಎಂಬ ಆಣೆಕಟ್ಟುಗಳನ್ನು ಕಟ್ಟಿದ್ದಾರೆ. ದೂರ ದೂರದ ಹೊಲಗಳಿಗೆ ಕಾಲುವೆಗಳ ಮುಖಾಂತರ ನನ್ನ ನೀರನ್ನು ಒಯ್ಯುತ್ತಾರೆ. ಸಾವಿರಾರು ಎಕರೆ ಭೂಮಿಯು ಹಚ್ಚ ಹಸಿರಾಗಿ ಶೋಭಿಸುತ್ತದೆ. ಜೋಳ, ಕಬ್ಬು, ಭತ್ತ ಮುಂತಾದ ಬೆಳೆಗಳು ಹುಲುಸಾಗಿ ಬೆಳೆಯುತ್ತವೆ.

ಜಾಣ ಮಕ್ಕಳೆ, ನಾನು ಎಲ್ಲರನ್ನೂ ಪ್ರೀತಿಸುವೆ. ಪರೋಪಕಾರವೇ ನನ್ನ ಧರ್ಮವಾಗಿದೆ. ನಿಸ್ವಾರ್ಥ ಸೇವೆಯೇ ನನ್ನ ಗುರಿಯಾಗಿದೆ. ನೀವೂ ಒಮ್ಮೆ ನನ್ನ ತೀರದ ಪ್ರದೇಶಗಳನ್ನು ನೋಡ ಬನ್ನಿರಿ. ನನ್ನ ಗುಣಗಳನ್ನು ಕಲಿಯಿರಿ.

ತಿಳಿಯಿತೆ?

### ಶಬ್ದಗಳ ಅರ್ಥ

ಜಲಾಶಯ – ಸರೋವರ ; ಹವೆ – ವಾಯು, ಗಾಳಿ ; ನಿಸ್ವಾರ್ಥ – ಏನನ್ನೂ ಬಯಸದ

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಮಂದಿರ – ..............; ಬೃಹದಾಕಾರ– ..............; ಕಾಲುವೆ – ..............;

ಪರೋಪಕಾರ – ..............

## ಅಭ್ಯಾಸ

### ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಕೃಷ್ಣೆಯ ಜನ್ಮಸ್ಥಾನ ಯಾವುದು ?

ಉತ್ತರ ..........................................................................

ಆ) ನದಿಗೆ ಕೃಷ್ಣೆ ಎಂದು ಹೆಸರು ಬರಲು ಕಾರಣವೇನು ?

ಉತ್ತರ ..........................................................................

ಇ) ಈ ನದಿಯು ಕೊನೆಗೆ ಯಾವ ಸಾಗರ ಸೇರುತ್ತದೆ ?

ಉತ್ತರ ..........................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

**ಪ್ರಶ್ನೆ 3) ಹೊಂದಿಸಿ ಬರೆಯಿರಿ.**

| ಅ ಗುಂಪು | | ಬ ಗುಂಪು |
|---|---|---|
| 1) ಕರ್ನಾಟಕ | ☐ | ಅ) ದತ್ತಾತ್ರೇಯ ಮಂದಿರ |
| 2) ಮಹಾರಾಷ್ಟ್ರ | ☐ | ಆ) ಶ್ರೀಶೈಲ ಮಲ್ಲಿಕಾರ್ಜುನ |
| 3) ಆಂಧ್ರಪ್ರದೇಶ | ☐ | ಇ) ಕೂಡಲಸಂಗಮ |

**ಪ್ರಶ್ನೆ4) ಕೆಳಗಿನ ನದಿಗಳ ತೀರದಲ್ಲಿ ಇರುವ ಮಂದಿರಗಳನ್ನು ಹೆಸರಿಸಿರಿ.**

**ಉದಾ :** ಕೃಷ್ಣಾನದಿಯ ತೀರದ ವಾಯಿ, ನರಸಿಂಹವಾಡಿಗಳಲ್ಲಿ ದತ್ತಾತ್ರೇಯ ಮಂದಿರವಿದೆ.


1) ಇಂದ್ರಾಯಣಿ ನದಿಯ ದಂಡೆಯ ಮೇಲೆ .................. ಇದೆ.

2) ಚಂದ್ರಭಾಗಾ ನದಿಯ ದಂಡೆಯ ಮೇಲೆ .................. ಇದೆ.

**ಉಪಕ್ರಮ :** ನಿಮ್ಮ ಸುತ್ತಮುತ್ತಲಿರುವ ಜಲಾಶಯಗಳಿಗೆ ಶಿಕ್ಷಕರ ಜೊತೆ ಭೇಟಿ ಕೊಡಿರಿ.



# 2. ರಾಮಕೃಷ್ಣನ ಜಾಣತನ



ಹಿಂದಕ್ಕೆ ವಿಜಯನಗರ ಎಂಬ ರಾಜ್ಯವಿತ್ತು. ಅದನ್ನು ಶ್ರೀಕೃಷ್ಣದೇವರಾಯನು ಆಳುತ್ತಿದ್ದನು. ಅವನ ಓಲಗದಲ್ಲಿ ಪಂಡಿತರು, ಕವಿಗಳು ಇದ್ದರು.

ಒಂದು ದಿನ ಓಲಗ ನಡೆದಿತ್ತು. ಆಗ ಒಬ್ಬ ಹೊರ ರಾಜ್ಯದ ಪಂಡಿತನು ಅಲ್ಲಿಗೆ ಬಂದನು. ದೊರೆಗಳೆ, ನಾನು ಅನೇಕ ಭಾಷೆಗಳನ್ನು ಬಲ್ಲೆನು. ನಿಮ್ಮ ಓಲಗದಲ್ಲಿ ದೊಡ್ಡ ಪಂಡಿತರು ಇದ್ದಾರೆ. ಅವರು ನನ್ನ ಮಾತೃಭಾಷೆಯನ್ನು ಕಂಡುಹಿಡಿಯಬಲ್ಲರೆ ? ಎಂದು ಕೇಳಿದನು.

ಶ್ರೀಕೃಷ್ಣದೇವರಾಯನು ತನ್ನ ಪಂಡಿತರ ಕಡೆಗೆ ನೋಡಿದನು. ಪಂಡಿತನ ಪ್ರಶ್ನೆಗೆ ಯಾರೂ ಉತ್ತರ ಕೊಡುವಂತೆ ಕಾಣಲಿಲ್ಲ, ಅಷ್ಟರಲ್ಲಿ ತೆನ್ನಾಲಿ ರಾಮಕೃಷ್ಣನು ಎದ್ದು ನಿಂತನು. ಪ್ರಭು, ಇಂದು ರಾತ್ರಿ ಪಂಡಿತನಿಗೆ ಸೊಗಸಾದ ಭೋಜನವನ್ನು ಮಾಡಿಸಲು ಹೇಳಿರಿ. ಅವರು ಊಟ ಮಾಡಿ ಇಲ್ಲಿಯೇ ಮಲಗಲಿ. ನಾಳೆ ನಾನು ಅವನ ಮಾತೃಭಾಷೆಯನ್ನು ಪತ್ತೆ ಮಾಡಿ ಹೇಳುವೆ, ಎಂದು ತಿಳಿಸಿದನು.

ಪಂಡಿತನು ರಾತ್ರಿ ಸೊಗಸಾದ ಊಟ ಮಾಡಿದನು. ಅವನು ಮೆತ್ತನೆಯ ಹಾಸಿಗೆಯ ಮೇಲೆ ಮಲಗಿದನು. ಪಂಡಿತನಿಗೆ ಗಾಢವಾದ ನಿದ್ರೆ ಹತ್ತಿತು.

ಮಧ್ಯರಾತ್ರಿ ಒಂದು ಗಂಟೆಯ ಸಮಯ. ರಾಮಕೃಷ್ಣನು ಒಂದು ಕೋಲನ್ನು ಹಿಡಿದುಕೊಂಡು ಬಂದನು. ಪಂಡಿತನ ಹೊಟ್ಟೆಯ ಮೇಲೆ ಸ್ವಲ್ಪಜೋರಾಗಿ ಉಜ್ಜಿದನು. ನಿದ್ರೆಯಲ್ಲಿದ್ದ ಪಂಡಿತನು ಗಾಬರಿಯಿಂದ ಎವರಡಾ ಅದಿ? (ಯಾರೋ ಅದು) ಎಂದು ಕೂಗಿದನು.

ರಾಮಕೃಷ್ಣನು ಅಲ್ಲಿಂದ ಮೆಲ್ಲನೆ ಹೊರ ಬಂದನು. ಪಂಡಿತನ ಗುಟ್ಟು ತಿಳಿದುಕೊಂಡನು. ನಿಶ್ಚಿಂತೆಯಿಂದ ಮನೆಯ ಕಡೆಗೆ ಸಾಗಿದನು.

ಮಾರನೆಯ ದಿನ ಪಂಡಿತನು ಕೃಷ್ಣದೇವರಾಯನ ಓಲಗಕ್ಕೆ ಬಂದನು. ಅದೇ ಸವಾಲನ್ನು ಹಾಕಿದನು. ರಾಮಕೃಷ್ಣನು ಎದ್ದು ನಿಂತು, ಪಂಡಿತನ ಮಾತೃಭಾಷೆ ತೆಲುಗು ಎಂದು ತಿಳಿಸಿದನು. ಈ ಮಾತನ್ನು ಕೇಳಿ ಪಂಡಿತನಿಗೆ ಆಶ್ಚರ್ಯವಾಯಿತು. ತನಗಿಂತ ಬುದ್ಧಿವಂತ ಪಂಡಿತರು ಇಲ್ಲಿದ್ದಾರೆ ಎಂದುಕೊಂಡನು. ಆವನು ತಲೆ ತಗ್ಗಿಸಿಕೊಂಡು ಓಲಗದಿಂದ ಹೊರಟು ಹೋದನು.

### ಶಬ್ದಗಳ ಅರ್ಥ

ಓಲಗ – ಸಭೆ ; ಪಂಡಿತ – ವಿದ್ವಾಂಸ ; ಭೋಜನ – ಊಟ ; ಮಾತೃಭಾಷೆ – ತಾಯಿಭಾಷೆ ;

ಗುಟ್ಟು – ರಹಸ್ಯ

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥ ಹುಡುಕಿ ಬರೆಯಿರಿ.

ಪ್ರಭು – ............ ; ಗಾಢ – ................. ; ಪತ್ತೆ – ................

## ಅಭ್ಯಾಸ

### ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ವಿಜಯನಗರ ಸಾಮ್ರಾಜ್ಯವನ್ನು ಆಳಿದ ಪ್ರಸಿದ್ಧ ದೊರೆ ಯಾರು?

ಉತ್ತರ ..................................................................................

ಆ) ಓಲಗದಲ್ಲಿ ಹೊರ ರಾಜ್ಯದ ಪಂಡಿತನು ರಾಜನಿಗೆ ಏನೆಂದು ಕೇಳಿದನು ?

ಉತ್ತರ ..................................................................................

### ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ..................................................................................

ಉತ್ತರ ..................................................................................

ಆ) ..................................................................................

ಉತ್ತರ ..................................................................................

**ಪ್ರಶ್ನೆ 3) ಕೆಳಗಿನ ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಪದಗಳನ್ನು ತುಂಬಿರಿ.**

ಅ) ದೊರೆಗಳೆ ನಾನು ಅನೇಕ ............. ಗಳನ್ನು ಬಲ್ಲೆನು.

ಆ) ರಾಮಕೃಷ್ಣನು ಒಂದು ............. ನ್ನು ಹಿಡಿದುಕೊಂಡು ಬಂದನು.

ಇ) ............. ಹೊಟ್ಟೆಯ ಮೇಲೆ ಸ್ವಲ್ಪ ಜೋರಾಗಿ ಉಜ್ಜಿದನು.

ಈ) ಪಂಡಿತನ ಮಾತೃಭಾಷೆ ............. ಇತ್ತು.

**ಪ್ರಶ್ನೆ 4) ಕೆಳಗಿನ ಶಬ್ದಗಳಿಗೆ ಅರ್ಥ ಹೇಳಿ ವಾಕ್ಯದಲ್ಲಿ ಉಪಯೋಗಿಸಿರಿ.**

1) ಸೊಗಸಾದ = ...................

ವಾಕ್ಯ ......................................................................................

2) ದೊರೆ = .....................

ವಾಕ್ಯ ......................................................................................

**ಪ್ರಶ್ನೆ 5) ಶ್ರೀ ಕೃಷ್ಣದೇವರಾಯನು ಆಳಿದ ಗತವೈಭವದ ಹಂಪೆಯ ಕುರಿತು ಒಂದು ಚಿಕ್ಕ ಟಿಪ್ಪಣಿ ಬರೆಯಿರಿ.**

......................................................................................

......................................................................................

......................................................................................

......................................................................................

......................................................................................

......................................................................................

**ಉಪಕ್ರಮ :** ಶಿಕ್ಷಕರ ಸಹಾಯದಿಂದ ಹಂಪೆಯ ಪ್ರವಾಸ ಕೈಕೊಳ್ಳಿರಿ.

# 3. ಶಿಕ್ಷಕ ದಿನಾಚರಣೆ



ಇವರಿಂದ
ಮಂದಾರ ಭೋಸಲೆ,
ಶಾರದಾಶ್ರಮ,
ದಾದರ (ಪಶ್ಚಿಮ),
ಮುಂಬಯಿ 400 014
ದಿನಾಂಕ : 8.9.2001

ಒಲವಿನ ಸಹೋದರಿ ಶುಭಾಂಗಿ,

ನಿನ್ನ ಪತ್ರ ಸಿಕ್ಕಿತು. ನಿಮ್ಮ ಶಾಲೆಯಲ್ಲಿ ನಡೆದ ಬಾಲಸಭೆಯ ಸುದ್ದಿ ಕೇಳಿ ಸಂತೋಷವಾಯಿತು. ನಾನು ನಿನಗೆ ನಮ್ಮ ಶಾಲೆಯಲ್ಲಿ ನಡೆದ ಶಿಕ್ಷಕ ದಿನದ ಕುರಿತು ತಿಳಿಸಲು ಆತುರನಾಗಿದ್ದೇನೆ.

ಮೊನ್ನೆ ಸಪ್ಟೆಂಬರ 5ರಂದು ನಮ್ಮ ಶಾಲೆಯಲ್ಲಿ ಶಿಕ್ಷಕ ದಿನವನ್ನು ಆಚರಿಸಿದೆವು. ಅಂದು ಡಾಕ್ಟರ್ ರಾಧಾಕೃಷ್ಣನ್ ಅವರ ಹುಟ್ಟುಹಬ್ಬ ಅಲ್ಲವೆ ? ಡಾ। ರಾಧಾಕೃಷ್ಣನ್ ಆದರ್ಶ ಶಿಕ್ಷಕರಾಗಿದ್ದರು. ಅವರು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಉತ್ತಮ ಸಂಸ್ಕಾರವನ್ನು ನೀಡಿದರು. ತಮ್ಮ ಪಾಂಡಿತ್ಯ, ಪ್ರತಿಭೆ, ಪ್ರಾಮಾಣಿಕ ಪ್ರಯತ್ನಗಳಿಂದ ಮುಂದೆ ಡಾ। ರಾಧಾಕೃಷ್ಣನ್ನರು ಭಾರತದ ರಾಷ್ಟ್ರಪತಿಯ ಸ್ಥಾನವನ್ನು ಅಲಂಕರಿಸಿದರು. ಡಾ। ರಾಧಾಕೃಷ್ಣನ್ನರಿಗೆ ಶಿಕ್ಷಕರೆಂದರೆ ಬಹಳ ಆದರ, ಪ್ರೀತಿ. ಆದುದರಿಂದ ನಾವು ಅವರ ಹುಟ್ಟುಹಬ್ಬವನ್ನು ಶಿಕ್ಷಕ ದಿನವೆಂದು ಆಚರಿಸುತ್ತೇವೆ. ನಾವು ಆಚರಿಸಿದ ಶಿಕ್ಷಕ ದಿನದ ಕುರಿತು ನನಗೆ ತುಂಬ ಹೆಮ್ಮೆ ಎನಿಸುತ್ತದೆ.

ನಮ್ಮ ಶಾಲೆಯಲ್ಲಿ ಹತ್ತನೆಯ ವರ್ಗದ ಮಕ್ಕಳು ಅಂದು ಶಿಕ್ಷಕರಾಗಿ ಬೇರೆ ಬೇರೆ ವರ್ಗಗಳಿಗೆ ಪಾಠ ಕಲಿಸಿದರು. ಅಂದು ಹತ್ತನೆಯ ವರ್ಗದ ಪ್ರಕಾಶನು ಮುಖ್ಯಾಧ್ಯಾಪಕನಾಗಿದ್ದನು. ಹರೀಶನು ನಮ್ಮ ವರ್ಗದ ಗಣಿತ ಶಿಕ್ಷಕನಾಗಿದ್ದನು. ಕಾಸೀಮನು ಏಳನೆಯ ವರ್ಗಕ್ಕೆ ವಿಜ್ಞಾನ ಕಲಿಸಿದನು. ಕ್ರಿಸ್ಟಲ ಎಂಟನೆಯ ವರ್ಗಕ್ಕೆ ಕನ್ನಡ ಕಲಿಸಿದಳು. ನಾವೆಲ್ಲ ಅವರಿಗೆ ವಿಧವಿಧವಾದ ಪ್ರಶ್ನೆ ಕೇಳಿದೆವು.

ಮಧ್ಯಾಹ್ನ ಹನ್ನೆರಡು ಗಂಟೆಗೆ ನಾವೆಲ್ಲ ಸಭಾಗೃಹದಲ್ಲಿ ಸೇರಿದೆವು. ವೇದಿಕೆಯಲ್ಲಿ ಡಾ। ರಾಧಾಕೃಷ್ಣನ್ನರ ಭಾವಚಿತ್ರ ಇಟ್ಟಿದ್ದರು. ಅದಕ್ಕೆ ಸುಂದರವಾದ ಹಾರವನ್ನು ಹಾಕಿದ್ದರು. ಪ್ರಕಾಶ ಅಂದಿನ ಸಭೆಯ ಅಧ್ಯಕ್ಷನಾಗಿದ್ದನು. ಹೇಮಾ, ಮತ್ತು ಬಸಪ್ಪ ಡಾ । ರಾಧಾಕೃಷ್ಣನ್ನರ ಕುರಿತು ಭಾಷಣ ಮಾಡಿದರು.



ಆ ಬಳಿಕ ಪ್ರಕಾಶನು ಭಾಷಣ ಮಾಡಿದನು. ಸೀಮಾ ಧನ್ಯವಾದ ಅರ್ಪಿಸಿದಳು. ನಾವು ಎಲ್ಲ ಶಿಕ್ಷಕರಿಗೆ ಪುಷ್ಪಗುಚ್ಛವನ್ನು ನೀಡಿ ಗೌರವ ಸಲ್ಲಿಸಿದೆವು. ವಿದ್ಯಾರ್ಥಿ ಶಿಕ್ಷಕರಿಗೂ ಗುಲಾಬಿ ಹೂ ನೀಡಿದೆವು. ‘ ನಾನು ಆದರ್ಶ ಗುರು’ ಎಂಬ ಕವಿತೆಯನ್ನು ಬರೆದು ನನ್ನ ನೆಚ್ಚಿನ ಗುರುಗಳಿಗೆ ಅರ್ಪಿಸಿದೆನು. ಗುರುಗಳು ಸಂತೋಷದಿಂದ ‘ ಹೀಗೆಯೇ ಬರೆಯುತ್ತಿರು’, ಎಂದು ನನ್ನ ಬೆನ್ನು ತಟ್ಟಿದರು.

ನಿಮ್ಮಲ್ಲಿಯೂ ಶಿಕ್ಷಕ ದಿನ ಆಚರಿಸಿರಬೇಕು, ಅಲ್ಲವೆ ? ಅದನ್ನು ತಿಳಿಸಲು ಮರೆಯಬೇಡ.

ಶುಭಾಂಗಿ, ಅಪ್ಪ , ಅಮ್ಮನಿಗೆ ನನ್ನ ವಂದನೆಗಳನ್ನು ತಿಳಿಸು. ನಾನು ದೀಪಾವಳಿ ರಜೆಯಲ್ಲಿ ಊರಿಗೆ ಬರುವೆನು. ಆಗ ನಿನಗೆ ಒಂದು ಸುಂದರವಾದ ಕಾಣಿಕೆ ತರುವೆನು. ನಿಮ್ಮೆಲ್ಲರ ಕ್ಷೇಮ ಸಮಾಚಾರವನ್ನು ಆಗಾಗ ತಿಳಿಸುತ್ತಿರು.

ನಿನ್ನ ಪ್ರೀತಿಯ ಅಣ್ಣ,
ಮಂದಾರ.

ಗೆ............

ಶುಭಾಂಗಿ ಭೋಸಲೆ,
ಶ್ರೀನಿವಾಸ ನಿವಾಸ,
ವಿಶ್ರಾಮಬಾಗ,
ಸಾಂಗಲಿ – 416 416.

### ಶಬ್ದಗಳ ಅರ್ಥ

ಪಾಂಡಿತ್ಯ – ಜಾಣತನ ; ಪ್ರತಿಭೆ – ಸಾಮಾರ್ಥ್ಯ ; ವೇದಿಕ – ಸಭಾಸ್ಥಾನ.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

  ಕೀಟಲೆ – ………… ; ನೆಚ್ಚಿನ – ………… ; ಧನ್ಯವಾದ – …………. ; ಅರ್ಪಿಸು – ………… ;

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಯಾರ ಶಾಲೆಯಲ್ಲಿ ಬಾಲಸಭೆ ಇತ್ತು ?

ಉತ್ತರ ……………………………………………………………………

ಆ) ಸಪ್ಟೆಂಬರ 5 ಈ ದಿನವನ್ನು ಯಾವ ದಿನವೆಂದು ಕರೆಯುತ್ತಾರೆ ?

ಉತ್ತರ ……………………………………………………………………

ಇ) ಅಂದು ಶಾಲೆಯಲ್ಲಿ ಯಾವ ವರ್ಗದ ವಿದ್ಯಾರ್ಥಿ ಮುಖ್ಯೋಪಾಧ್ಯಾಯನಾದನು?

ಉತ್ತರ ……………………………………………………………………

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ……………………………………………………………………

ಉತ್ತರ ……………………………………………………………………

ಆ) ……………………………………………………………………

ಉತ್ತರ ……………………………………………………………………

**ಪ್ರಶ್ನೆ 3) ಕೆಳಗಿನ ವಾಕ್ಯಗಳ ಕೊನೆಗೆ ಕೊಟ್ಟಿರುವ ಚೌಕಟ್ಟಿನ ಉತ್ತರಗಳನ್ನು ಕೆಳಗಿನವುಗಳಿಂದ ಆಯ್ದು ಬರೆಯಿರಿ.**

ಹರೀಶ ಶಿರೀನ ಪ್ರಕಾಶ ಕಾಸೀಮ

1) ಏಳನೆಯ ವರ್ಗಕ್ಕೆ ವಿಜ್ಞಾನ ಕಲಿಸಿದವನು. [ ]

2) ಮುಖ್ಯಾಧ್ಯಾಪಕನಾಗಿದ್ದ ವಿದ್ಯಾರ್ಥಿ. [ ]

3) ಮಂದಾರನ ವರ್ಗಕ್ಕೆ ಗಣಿತ ಕಲಿಸಿದವನು. [ ]

4) ಎಂಟನೆಯ ವರ್ಗಕ್ಕೆ ಕನ್ನಡ ಕಲಿಸಿದವನು. [ ]

**ಪ್ರಶ್ನೆ 4) ಕೆಳಗಿನ ದಿನಾಂಕಗಳಲ್ಲಿ ಯಾವ ಯಾವ ದಿನಾಚರಣೆ ಆಚರಿಸುತ್ತಾರೆ?**

ಉದಾ : ಸಪ್ಟಂಬರ 5 – ಶಿಕ್ಷಕರ ದಿನಾಚರಣೆ

ನವ್ಹೆಂಬರ 14 ..................

ಅಕ್ಟೋಬರ 2 ..................

ಮೇ 1 ..................

ಅಗಸ್ಟ್ ..................

**ಪ್ರಶ್ನೆ 5) ಕೆಳಗಿನ ಶಬ್ದಗಳ ವಿರುದ್ಧ ಪದಗಳನ್ನು ಬರೆಯಿರಿ.**

ಪ್ರಾಮಾಣಿಕ X ಆದರ X

ಹಗಲು X ಗೌರವ X

**ಉಪಕ್ರಮ :** ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆ ಕುರಿತು ನಿಮ್ಮ ಗೆಳೆಯನಿಗೆ ಪತ್ರ ಬರೆಯಿರಿ.

# 4. ವ್ಯಾಪಾರಿಯ ಚತುರತೆ

ಒಂದು ಊರಿನಲ್ಲಿ ಒಬ್ಬ ವ್ಯಾಪಾರಿ ಇದ್ದನು. ಅವನಿಗೆ ಇನ್ನು ಮದುವೆ ಆಗಿರಲಿಲ್ಲ, ಜೊತೆಗೂ ಯಾರು ಇರಲಿಲ್ಲ. ಒಂದು ದಿನ ಅವನು ವ್ಯಾಪಾರ ಮಾಡಲೆಂದು ಆ ಊರಿನ ಸಂತೆಗೆ ಹೋಗಿದ್ದನು. ಅಂದು ಅವನಿಗೆ ಒಳ್ಳೆಯ ಲಾಭವಾಗಿ ಸಾಕಷ್ಟು ಹಣವನ್ನು ಸಂಪಾದಿಸಿದ್ದನು. ಇಷ್ಟು ಹಣವನ್ನು ನಾನು ತೆಗೆದುಕೊಂಡು ಹೇಗೆ ಕಾಪಾಡಿಕೊಳ್ಳುವದು ? ನಾನು ಮನೆಯಲ್ಲಿ ಇರುವುದು ಒಬ್ಬನೇ. ವ್ಯಾಪಾರಕ್ಕೆಂದು ಹೋದರೆ ಎರಡು, ಮೂರು ದಿನವಾಗುತ್ತದೆ ಮನೆಗೆ ಮರಳಲು ಎಂದು ಯೋಚಿಸಿ, ಬ್ಯಾಂಕಿನಲ್ಲಿ ಜಮಾ ಮಾಡಿದರಾಯಿತು ಎಂದುಕೊಂಡು ಬಂದ ಲಾಭದ ಹಣವನ್ನು ಎಣಿಸುತ್ತಾ ಕುಳಿತನು.


ಹೀಗೆ ಹಣ ಎಣಿಸುವುದನ್ನು ದೂರದಿಂದ ಒಬ್ಬ ಕಳ್ಳ ನೋಡುತ್ತಾ ನಿಂತಿದ್ದನು. ಅಂದು ವ್ಯಾಪಾರಿಗೆ ತಡವಾದ್ದರಿಂದ ಮರುದಿನ ಬೆಳಿಗ್ಗೆ ಜಮಾ ಮಾಡಲು ಯೋಚಿಸಿ ಮನೆಗೆ ತೆಗೆದುಕೊಂಡು ಹೋದನು. ಬೆಳಿಗ್ಗೆಯಿಂದ ವ್ಯಾಪಾರ ಮಾಡಿ ದಣಿದ ವ್ಯಾಪಾರಿ ಮಲಗಲು ಮಂಚದ ಮೇಲೆ ಹಾಸಿಗೆ ಹಾಸಿ ಮಲಗಬೇಕು ಎನ್ನುವಷ್ಟರಲ್ಲಿ ಬಾಗಿಲು ಬಡಿದ ಸದ್ದು ಕೇಳಿಸಿತು, ಹೋಗಿ ಬಾಗಿಲು ತೆರೆದು ನೋಡಿದನು.

ಮುದುಕನ ವೇಷ ಧರಿಸಿ ಆ ಕಳ್ಳ ಬಂದಿದ್ದನು. ವ್ಯಾಪಾರಿಗೆ ಅದು ಗೊತ್ತಾಗಲಿಲ್ಲ. ಏನು ಬೇಕಾಗಿತ್ತು ಎಂದು ವ್ಯಾಪಾರಿ ಕೇಳಿದನು. ಆಗ ಆ ಮುದುಕನ ವೇಷ ಧರಿಸಿದವ ಹೇಳಿದನು, 'ನಾನು ಇಲ್ಲೇ ಪಕ್ಕದ ಊರಿನವನು. ಇಲ್ಲಿಗೆ ವ್ಯಾಪಾರಕ್ಕೆಂದು ಬಂದಿದ್ದೆ. ಈ ದಿನ ತುಂಬಾ ತಡವಾಗಿ ಹೋಗಿದೆ. ಊರಿಗೆ ಮರಳಿ ಹೋಗಲು ಈ ಹೊತ್ತಿನಲ್ಲಿ ಬಸ್ಸು ಇಲ್ಲ. ಆದ್ದರಿಂದ ಸ್ವಲ್ಪ ಜಾಗ ಕೊಟ್ಟರೆ ಮಲಗಿ ಬೆಳಿಗ್ಗೆ ಎದ್ದು ಊರಿಗೆ ಹೋಗುವೆನು' ಎಂದನು.

ವ್ಯಾಪಾರಿ ಸ್ವಲ್ಪ ಕನಿಕರ ಸ್ವಭಾವದವನು, ಇಲ್ಲ ಎನ್ನಲಾಗಲಿಲ್ಲ ಪಾಪ ವಯಸ್ಸಾದವ ಬೇರೆ ಎಂದುಕೊಂಡು ಒಳ ಕರೆದನು. ಒಂದು ಕಡೆ ಹಣವಿದ್ದ ಭಯ ಬೇರೆ. ಆ ಮುದುಕನಿಗೆ ಮಂಚದ ಮೇಲೆ ಮಲಗಲು ಹೇಳಿ ತಾನು ಬೇರೆ ಹಾಸಿಗೆ ಹಾಸಿಕೊಂಡು ಮಲಗಿದನು.

ಮಧ್ಯರಾತ್ರಿ ಆಯಿತು. ಮುದುಕನ ವೇಷ ಧರಿಸಿದ ಕಳ್ಳ ಎದ್ದು ವ್ಯಾಪಾರಿಯನ್ನು ನೋಡಿದನು. ವ್ಯಾಪಾರಿ ದಣಿದಿದ್ದರಿಂದ ಚೆನ್ನಾಗಿ ನಿದ್ದೆ ಹತ್ತಿದೆ ಎಂದು ಖಚಿತಪಡಿಸಿಕೊಂಡು, ವ್ಯಾಪರಿ ಇಟ್ಟಿದ್ದ ಹಣವನ್ನು ಹುಡುಕಲು ಪ್ರಾರಂಭಿಸಿದನು. ಎಷ್ಟು ಹುಡುಕಿದರೂ ಆ ಹಣ ಸಿಗಲಿಲ್ಲ. ಕಪಾಟುಗಳಲ್ಲಿ, ಕೋಣೆಯೊಳಗಿದ್ದ ಎಲ್ಲ ಸಾಮಾನುಗಳಲ್ಲೂ ಹುಡುಕಿದನು. ಹಣ ಸಿಗಲಿಲ್ಲ.

ಹಾಗಾದರೆ ಹಣ ಎಲ್ಲಿ ಇಟ್ಟಿದಾನೆ. ಎಲ್ಲ ಹುಡುಕಿದರೂ ಸಿಗಲಿಲ್ಲವೆಂದು ತಾನು ಮಲಗಿದ ಮಂಚದ ಮೇಲೆ ಯೋಚನೆ ಮಾಡುತ್ತಾ ಕುಳಿತನು. ಅಷ್ಟರಲ್ಲಿ ಬೆಳಗಾಗತೊಡಗಿತು. ವ್ಯಾಪಾರಿಗೆ ಎಚ್ಚರವಾಯಿತು. ಮುದುಕನು ಮಲಗಿದ್ದವನ ಹಾಗೆ ನಟಿಸಿದನು.



ಕಳ್ಳನಿಗೆ ನಿರಾಶೆಯಾಯಿತು. ರಾತ್ರಿ ಮಲಗಲು ಜಾಗ ಕೊಟ್ಟಿದ್ದಕ್ಕೆ ಕೃತಜ್ಞತೆಗಳನ್ನು ಹೇಳಿ ಹೊರಡಲು ಸಿದ್ಧನಾಗಿ ನಿಂತಾಗ, ವ್ಯಾಪಾರಿಯು ನೀವು ನನ್ನ ಹಣವನ್ನು ಕಾವಲು ಮಾಡಿದ್ದಕ್ಕಾಗಿ ನಿಮಗೂ ಧನ್ಯವಾದಗಳು ಎಂದು ಹೇಳುತ್ತ, ಮುದುಕನ ವೇಷ ಧರಿಸಿದ ಕಳ್ಳ ಮಲಗಿದ ಮಂಚದ ಹಾಸಿಗೆ ಕೆಳಗಿದ್ದ ಹಣವನ್ನು ತೆಗೆಯುತ್ತಾ ನಮಸ್ಕರಿಸಿ ಅವನನ್ನು ಕಳುಹಿಸಿಕೊಟ್ಟನು.

ಮುದುಕನ ವೇಷ ಧರಿಸಿದ ಕಳ್ಳನು ತನ್ನ ಮೂರ್ಖತನವನ್ನು ನೆನೆದು ಸುಮ್ಮನೆ ಹೊರಟುಹೋದನು.

**– ಜಿ. ಮಂಗಳ**

### ಶಬ್ದಗಳ ಅರ್ಥ

ಜಮಾ–ಕೂಡಿ ಇಡು ; ಖಾತರಿ – ನಿಶ್ಚಿತತೆ ; ಕನಿಕರ – ದಯೆ ; ಧನ್ಯವಾದ – ಉಪಕಾರ ಸ್ಮರಣೆ

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಸಂತೆ – ............ ; ಸಂಪಾದಿಸು – ................. ;

ಧರಿಸು – ............ ; ಸಿದ್ಧನಾಗು – ................. ;

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ವ್ಯಾಪಾರಿಯು ಊರಿನ ಸಂತೆಗೆ ಏಕೆ ಹೋಗಿದ್ದನು ?

ಉತ್ತರ ......................................................................

ಆ) ವ್ಯಾಪಾರಿ ಹಣ ಎಣಿಸುತ್ತಿರುವುದನ್ನು ದೂರದಿಂದ ಯಾರು ನೋಡುತ್ತಿದ್ದರು ?

ಉತ್ತರ ......................................................................

ಇ) ಕಳ್ಳನು ಯಾವ ವೇಷ ಧರಿಸಿದ್ದನು ?

ಉತ್ತರ ......................................................................

ಈ) ವ್ಯಾಪಾರಿಯ ಸ್ವಭಾವ ಎಂತಹದು ?

ಉತ್ತರ ......................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಮೂರು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ......................................................................

ಉತ್ತರ ......................................................................

ಆ) ......................................................................

ಉತ್ತರ ......................................................................

ಇ) ......................................................................

ಉತ್ತರ ......................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ವ್ಯಾಪಾರಿಯು ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡಲು ಏಕೆ ನಿರ್ಧರಿಸಿದನು ?

ಉತ್ತರ ......................................................................

......................................................................

ಆ) ಮುದುಕನ ವೇಷ ಧರಿಸಿ ಬಂದಿದ್ದ ಕಳ್ಳನು ವ್ಯಾಪಾರಿಗೆ ಏನು ಹೇಳಿದನು ?

ಉತ್ತರ ......................................................................

......................................................................

ಇ) ಮಧ್ಯರಾತ್ರಿಯಲ್ಲಿ ಕಳ್ಳನು ಎದ್ದು ಏನು ಮಾಡಿದನು ?

ಉತ್ತರ ..........................................................................

..........................................................................

ಈ) ಬೆಳಿಗ್ಗೆ ಕಳ್ಳನು ಹೊರಡಲು ಸಿದ್ದನಾಗಿ ನಿಂತಾಗ ವ್ಯಾಪಾರಿ ಕಳ್ಳನಿಗೆ ಏನು ಹೇಳಿದನು ?

ಉತ್ತರ ..........................................................................

..........................................................................

**ಪ್ರಶ್ನೆ 4) ಕೆಳಗಿನ ಮಾತುಗಳು ಯಾರು ಯಾರಿಗೆ ಹೇಳಿದರು ?**

ಅ) ನಾನು ಇಲ್ಲೇ ಪಕ್ಕದ ಊರಿನವನು. ಇಲ್ಲಿಗೆ ವ್ಯಾಪಾರಕ್ಕೆಂದು ಬಂದಿದ್ದೆ.

..........................................................................

ಆ) ನೀವು ನನ್ನ ಹಣವನ್ನು ಕಾವಲು ಮಾಡಿದಕ್ಕಾಗಿ ಧನ್ಯವಾದಗಳು.

..........................................................................

**ಉಪಕ್ರಮ :** ಸಮೀಪದ ಕಿರಾಣಿ ಅಂಗಡಿಗೆ ಭೆಟ್ಟಿಕೊಟ್ಟು ದಿನಸಿ ವಸ್ತುಗಳ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

| | | |
|---|---|---|
| ______ | ______ | ______ |
| ______ | ______ | ______ |
| ______ | ______ | ______ |
| ______ | ______ | ______ |

# 5. ಧ್ವನಿ ಪ್ರದೂಷಣೆ






ಅಂದು ಶಾಲೆಯಲ್ಲಿ ಎಲ್ಲ ಕಡೆಗೂ ಸಡಗರವೇ ಸಡಗರ. ಮಕ್ಕಳೆಲ್ಲ, ಗಡಿಬಿಡಿಯಿಂದ ಆಚೆ-ಈಚೆ ಓಡಾಡುತ್ತಿದ್ದರು. ಮರುದಿನವೇ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಲನವಿತ್ತು. ಕಾರ್ಯಕ್ರಮಗಳ ಸಿದ್ಧತೆಗಳು ವೇಗದಿಂದ ಸಾಗಿದ್ದವು. ಐದನೆಯ ತರಗತಿಯ ಮಕ್ಕಳು 'ಆದಿವಾಸಿ ನೃತ್ಯ'ವನ್ನು ಮಾಡುತ್ತಿದ್ದರು. ವರ್ಗದ ಸಮೀಪ 'ಧ್ವನಿವರ್ಧಕ'ದ ಸ್ವರ ಕೇಳಿ ಬರುತ್ತಿತ್ತು.

ಅಷ್ಟರಲ್ಲಿ ಐದನೆಯ ತರಗತಿಯ ಗುರುಗಳು ಬಂದರು. ಮಕ್ಕಳೆಲ್ಲರೂ ಸುಪ್ರಭಾತ ಗುರುಗಳೇ, ಅಂದರು.

**ಗುರುಗಳು** : ಮಕ್ಕಳೇ ಧ್ವನಿ ಸುರುಳಿಯನ್ನು ಸ್ವಲ್ಪ ನಿಲ್ಲಿಸಿರಿ. ಇಡೀ ಶಾಲೆಗೆ ನಿಮ್ಮ ಗದ್ದಲ ಕೇಳುತ್ತಲಿದೆ. ಎಲ್ಲಿದ್ದಾನೆ ಸಮೀರ ?

**ಸಮೀರ** : ಕ್ಷಮಿಸಿರಿ ಗುರುಗಳೇ, ನೃತ್ಯಮಾಡುವ ಭರದಲ್ಲಿ ಧ್ವನಿ ಹೆಚ್ಚಾದುದು ನಮಗೆ ತಿಳಿಯಲೇ ಇಲ್ಲ.

**ಗುರುಗಳು** : ಇಷ್ಟು ಜೋರಿನಿಂದ ಧ್ವನಿ ಸುರುಳಿಯನ್ನು ಕೇಳಿದರೆ ಕಿವಿಗಳಿಗೆ ಅಪಾಯ ಉಂಟಾಗುತ್ತದೆ.

**ವೃಂದಾ** : ಅಂದರೆ, ಇದರಿಂದ ಕಿವಿಗಳಿಗೆ ಏನು ಆಗುತ್ತದೆ ಗುರುಗಳೇ ?

**ಗುರುಗಳು** : ಕಿವಿಗಳ ಒಳಗೆ ತೆಳುವಾದ ಧ್ವನಿ ಪಟಲ ಇರುತ್ತದೆ. ಆ ಪಟಲದ ಮೇಲೆ ಇಂತಹ ಧ್ವನಿಯ ತೆರೆಗಳು ಅಪ್ಪಳಿಸುತ್ತವೆ. ಇದರಿಂದ ಆ ಪಟಲಗಳ ಶಕ್ತಿ ಕಡಿಮೆಯಾಗುತ್ತದೆ. ಕಿವುಡುತನ ಬರುತ್ತದೆ.

**ಮಹಮ್ಮದ** : ಗುರುಗಳೆ, ರಸ್ತೆಯಲ್ಲಿ ಹೋಗುವ ವಾಹನಗಳು ಎಂತಹ ಭಯಂಕರ ಸದ್ದು ಮಾಡುತ್ತವಲ್ಲ!

**ಗುರುಗಳು** : ಮಹಮ್ಮದ, ನೀನು ಸರಿಯಾಗಿ ಹೇಳಿದೆ. ವಾಹನಗಳು ರಸ್ತೆಯ ಮೇಲೆ ಸತತವಾಗಿ ಕರ್ಕಶ ಧ್ವನಿ ಮಾಡುವುದರಿಂದಲೂ ನಮ್ಮ ಕಿವಿಗೆ ಅಪಾಯ ಉಂಟಾಗುತ್ತದೆ. ಇದಕ್ಕೆ ಧ್ವನಿ ಪ್ರದೂಷಣೆ ಎನ್ನುತ್ತಾರೆ.

**ವಸಂತ** : ಗುರುಗಳೆ, ಮನೆಯಲ್ಲಿ ರೇಡಿಯೋ, ದೂರದರ್ಶನಗಳನ್ನು ದೊಡ್ಡದಾಗಿ ಹಚ್ಚಬಾರದು ಅಲ್ಲವೆ ?

**ಗುರುಗಳು** : ವಸಂತ, ನಿನ್ನ ಮಾತು ತುಂಬ ಸರಿಯಾಗಿದೆ. ಮನೆಯಲ್ಲಷ್ಟೇ ಅಲ್ಲ, ಸಭೆ-ಸಮಾರಂಭಗಳಲ್ಲೂ ಹಬ್ಬ-ಹರಿದಿನಗಳಲ್ಲೂ ಧ್ವನಿವರ್ಧಕಗಳನ್ನು ಜೋರಾಗಿ ಹಚ್ಚಬಾರದು. ಇದರಿಂದ ನಮ್ಮ ಕಿವಿಯ ಧ್ವನಿ ಪಟಲದ ಮೇಲೆ ಪರಿಣಾಮವಾಗುತ್ತದೆ.

**ಮೀರಾ** : ಗುರುಗಳೆ, ಇಂದು ನೀವು ನಮ್ಮ ಕಣ್ಣು ತೆರೆಯಿಸಿದಿರಿ. ಧ್ವನಿ ಪ್ರದೂಷಣೆಯ ಕುರಿತು ನಾವೆಲ್ಲ ಇನ್ನು ಮುಂದೆ ತುಂಬ ಎಚ್ಚರಿಕೆಯಿಂದ ಇರುತ್ತೇವೆ.

**ಚಾರ್ಲಿ** : ಗುರುಗಳೆ, ನಮ್ಮ ನೃತ್ಯವನ್ನು ಮುಂದುವರಿಸಬಹುದೇ ?

**ಗುರುಗಳು** : ಸರಿ ಸರಿ, ಮುಂದುವರಿಸಿರಿ.

**ಶಬ್ದಗಳ ಅರ್ಥ :**

ಸಡಗರ - ಉತ್ಸಾಹ ; ಆದಿವಾಸಿ - ಬುಡಕಟ್ಟು ಜನಾಂಗ ; ಸ್ವರ - ಧ್ವನಿ ; ಸುಪ್ರಭಾತ - ಬೆಳಗಿನ ಹೊತ್ತು, ಮುಂಜಾವು

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಪ್ರದೂಷಣೆ - ................ ; ಪಟಲ - ............ ; ಕಿವುಡ - ................ ; ಕರ್ಕಶ - ................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಶಾಲೆಯಲ್ಲಿ ಸಡಗರವು ಏಕೆ ತುಂಬಿಕೊಂಡಿತ್ತು ?

ಉತ್ತರ ..........................................................................

ಆ) ಐದನೆಯ ತರಗತಿಯ ಮಕ್ಕಳು ಯಾವ ನೃತ್ಯ ಮಾಡುತ್ತಿದ್ದರು ?

ಉತ್ತರ ..........................................................................

ಇ) ಧ್ವನಿ ಪ್ರದೂಷಣೆಯಿಂದ ಆಗುವ ತೊಂದರೆಗಳು ಯಾವವು ?

ಉತ್ತರ ..........................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..........................................................................

ಉತ್ತರ ..........................................................................

ಆ) ..................................................................................

ಉತ್ತರ ..................................................................................

**ಪ್ರಶ್ನೆ 3) ಕಂಸದಲ್ಲಿಯ ಯೋಗ್ಯ ಶಬ್ದವನ್ನು ಆಯ್ದು ಬಿಟ್ಟ ಸ್ಥಳ ತುಂಬಿರಿ.**

1) ಶಾಲೆಯಲ್ಲಿ ಎಲ್ಲ ಕಡೆಗೆ ಸಡಗರವೇ ಸಡಗರವಿತ್ತು. ಏಕೆಂದರೆ .....................

(ಶಿಕ್ಷಕರ ದಿನಾಚರಣೆ, ಮಕ್ಕಳ ಸ್ನೇಹ ಸಮ್ಮೇಲನ, ಮಕ್ಕಳ ದಿನಾಚರಣೆ, ಸ್ವಾತಂತ್ರ್ಯ ದಿನಾಚರಣೆ)

2) ನೃತ್ಯ ಮಾಡುವ ಭರದಲ್ಲಿ ಧ್ವನಿ ಹೆಚ್ಚಾದುದು ನಮಗೆ ತಿಳಿಯಲೇ ಇಲ್ಲ, ಈ ಮಾತು ಹೇಳಿದವರು .................

(ಮಹಮ್ಮದ, ವೃಂದಾ, ಸಮೀರ, ಚಾರ್ಲಿ)

3) ಧ್ವನಿ ಸುರುಳಿ ಜೋರಾಗಿದ್ದರೆ ................ ಗೆ ತೊಂದರೆ ಉಂಟಾಗುವದು.

(ಕಣ್ಣು, ಮೂಗು, ಕಿವಿ, ತ್ವಚೆ)

**ಪ್ರಶ್ನೆ 4) ''ಪ್ರ''ದಿಂದ ಪ್ರಾರಂಭವಾಗುವ 5 ಶಬ್ದಗಳನ್ನು ರಚಿಸಿರಿ.**

**ಉದಾ :** ಪ್ರ = ಪ್ರಯತ್ನ

ಪ್ರ = .................... ಪ್ರ = .................... ಪ್ರ = ....................

ಪ್ರ = ....................

**ಪ್ರಶ್ನೆ 5) ಕೆಳಗೆ ಕೊಟ್ಟಿರುವ ಬೇರೆ ಬೇರೆ ರಾಜ್ಯಗಳ ನೃತ್ಯಗಳನ್ನು ಹೆಸರಿಸಿರಿ.**

| | | | |
|---|---|---|---|
| **ಉದಾ :** | ಮಹಾರಾಷ್ಟ್ರ | ________ | ಲಾವಣಿ |
| | ಕರ್ನಾಟಕ | ________ | |
| | ಆಂಧ್ರಪ್ರದೇಶ | ________ | |
| | ಓಡಿಶಾ | ________ | |
| | ಪಂಜಾಬ | ________ | |

**ಉಪಕ್ರಮ :** ಧ್ವನಿ ಪ್ರದೂಷಣೆಯ ಕುರಿತು ನಾಲ್ಕು ಸಾಲು ಬರೆಯಿರಿ.

..................................................................................

..................................................................................

..................................................................................

..................................................................................

# 6. ಗಾನಯೋಗಿ



ಶ್ರೀ ಪಂಚಾಕ್ಷರಿ ಗವಾಯಿಗಳು ಗಾನಯೋಗಿಗಳೆಂದು ಪ್ರಸಿದ್ಧರಾದವರು. ಗವಾಯಿ ಎಂದರೆ ಗಾಯನದಲ್ಲಿ ಪರಿಣತ ಎಂದು ಅರ್ಥ.

ಧಾರವಾಡ ಜಿಲ್ಲೆಯ ಹಾನಗಲ್ಲ ತಾಲೂಕಿನಲ್ಲಿ ಕಾಡಶೆಟ್ಟಿ ಎಂಬ ಹಳ್ಳಿ ಇದೆ. ಅಲ್ಲಿ ಗುರುಪಾದಯ್ಯ - ನೀಲಮ್ಮ ಎಂಬ ದಂಪತಿಗಳಿದ್ದರು. ಅವರಿಗೆ ಇಬ್ಬರು ಗಂಡು ಮಕ್ಕಳಿದ್ದರು. ಹಿರಿಯವನ ಹೆಸರು ಗುರುಬಸಯ್ಯ. ಕಿರಿಯವನ ಹೆಸರು ಗದಿಗಯ್ಯ. ಇಬ್ಬರೂ ಹುಟ್ಟು ಕುರುಡರು. ಅದಕ್ಕಾಗಿ ತಂದೆ-ತಾಯಿಗಳು ಮಮ್ಮಲ ಮರುಗಿದರು.

ಆ ಎಳೆಯರ ಕಂಠ ಬಲು ಮಧುರವಾಗಿತ್ತು. ಅವರು ಸೊಗಸಾದ ಹಾಡುಗಳನ್ನು ಹೇಳುತ್ತಿದ್ದರು. ಯಾರಾದರೂ ಹಾಡಿದರೆ, ಆ ಹಾಡುಗಳನ್ನು ನೆನಪಿಟ್ಟುಕೊಳ್ಳುತ್ತಿದ್ದರು. ಆ ಕೂಡಲೆ ಸರಾಗವಾಗಿ ಹಾಡಿ ತೋರಿಸುತ್ತಿದ್ದರು. ಅವರು ಮದ್ದಳೆ ನುಡಿಸುವುದನ್ನೂ ಕಲಿತುಕೊಂಡಿದ್ದರು.

ಗುರುಪಾದಯ್ಯನವರು ಮಕ್ಕಳನ್ನು ಹಾನಗಲ್ಲಿನ ಮಠಕ್ಕೆ ಕರೆದಕೊಂಡು ಹೋದರು. ಅಲ್ಲಿಯ ಕುಮಾರ ಸ್ವಾಮಿಗಳು ಇವರ ಹಾಡನ್ನು ಕೇಳಿ ಮೆಚ್ಚಿದರು. ಗುರುಪಾದಯ್ಯ, ಈ ಮಕ್ಕಳನ್ನು ನನಗೊಪ್ಪಿಸಿ ಬಿಡು, ಎಂದರು. ಅದಕ್ಕೆ ಗುರುಪಾದಯ್ಯನು ಒಪ್ಪಿದನು.

ಹಾನಗಲ್ಲ ಕುಮಾರ ಸ್ವಾಮಿಗಳು ಒಬ್ಬ ಸಂಗೀತಗಾರನ ಮಠಕ್ಕೆ ಕರೆಯಿಸಿಕೊಂಡರು. ಈ ಮಕ್ಕಳಿಗೆ ಸಂಗೀತಪಾಠ ಹೇಳಿಸತೊಡಗಿದರು. ಮುಂದೆ ಕೆಲವು ದಿನಗಳಲ್ಲಿ ಗುರುಬಸಯ್ಯನು ಅಕಾಲ ಮರಣಕ್ಕೆ ತುತ್ತಾದನು. ಅಣ್ಣನ ಅಗಲುವಿಕೆಯಿಂದ ಗದಿಗಯ್ಯನಿಗೆ ತುಂಬ ದುಃಖವಾಯಿತು.

ಗದಿಗಯ್ಯನು ಬೆಳೆದು ದೊಡ್ಡವನಾದನು. ಅವನನ್ನು ಸಂಗೀತದ ಹೆಚ್ಚಿನ ಶಿಕ್ಷಣಕ್ಕಾಗಿ ಸ್ವಾಮಿಗಳು ಮೈಸೂರಿಗೆ ಕಳುಹಿಸಿದರು. ಅಲ್ಲಿ ಗದಿಗಯ್ಯನು ಸಂಗೀತದಲ್ಲಿ ಪರಿಣತಿಯನ್ನು ಪಡೆದನು. ಜನಮೆಚ್ಚುಗೆಯನ್ನೂ ಗಳಿಸಿದನು.

ಅನಂತರ ಅವನು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕಲಿಯಲು ಮಿರಜಗೆ ಹೋದನು. ಕೆಲವು ದಿನಗಳಲ್ಲಿಯೇ ಸಂಗೀತದಲ್ಲಿ ವಿಶೇಷ ಪಾಂಡಿತ್ಯವನ್ನು ಪಡೆದನು.

ಗಾಯನದ ಜೊತೆಗೆ ಅವನಿಗೆ ಕರಗತವಾದ ವಾದ್ಯಗಳು ಹಲವಾರು. ಹಾರ್ಮೋನಿಯಂ, ಪಿಟೀಲು, ಸಾರಂಗ ದಿಲ್‌ರುಬಾ, ಕೊಳಲು ಮುಂತಾದವುಗಳನ್ನು ಅವನು ಸರಾಗವಾಗಿ ನುಡಿಸುತ್ತಿದ್ದನು. ತಬಲಾದ ಮೇಲೆ ಅವನ ಬೆರಳುಗಳು ಸಲೀಸಾಗಿ ಆಡುವುದನ್ನು ಕಂಡು ಜನರು ಬೆರಗಾಗುತ್ತಿದ್ದರು.

ಬಾಗಲಕೋಟೆಯಲ್ಲಿ ಒಮ್ಮೆ ಅವನ ಸಂಗೀತ ಸಭೆಯನ್ನು ಏರ್ಪಡಿಸಿದ್ದರು. ಜನರು ಅವನ ಸಂಗೀತವನ್ನು ಮೆಚ್ಚಿಬಹಳ ಕೊಂಡಾಡಿದರು. ಪಂಚಾಕ್ಷರ ಗವಾಯಿ ಎಂದು ಬಿರುದು ಕೊಟ್ಟು ಗೌರವಿಸಿದರು. ಅಂದಿನಿಂದ ಗದಿಗಯ್ಯ ಪಂಚಾಕ್ಷರಿ ಗವಾಯಿ ಎಂದು ಪ್ರಸಿದ್ಧರಾದರು.

ಪಂಚಾಕ್ಷರಿ ಗವಾಯಿಗಳು ಒಂದು ಸಂಗೀತ ಶಾಲೆಯನ್ನು ಪ್ರಾರಂಭಿಸಿದರು. ಆ ಶಾಲೆಯಲ್ಲಿ ಮೇಲು-ಕೀಳು, ಬಡವ-ಬಲ್ಲಿದ ಎಂಬ ಭೇದವಿಲ್ಲದೆ ಎಲ್ಲರಿಗೂ ಪ್ರವೇಶವಿತ್ತು. ಅಲ್ಲಿ ಅಂಧ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಾಶಸ್ತ್ಯವಿತ್ತು.

ಗವಾಯಿಗಳು ಸಂಗೀತದ ಜೊತೆಗೆ ಕೀರ್ತನ ಕಲೆಯನ್ನೂ ಸಾಧಿಸಿ ಕೊಂಡಿದ್ದರು. ಅಲ್ಲದೆ ಸ್ವತಃ ನಾಟಕ ಕಂಪನಿಯನ್ನು ಕಟ್ಟಿದ್ದರು. ಹಲವು ನಾಟಕಗಳನ್ನು ಪ್ರದರ್ಶಿಸಿದರು. ಅದರಿಂದ ಬಂದ ಹಣವನ್ನು ಕುರುಡ ಮಕ್ಕಳ ಏಳ್ಗೆಗಾಗಿ ವಿನಿಯೋಗಿಸಿದರು.

ಪಂಚಾಕ್ಷರಿ ಗವಾಯಿಗಳ ಸಂಗೀತ ಮತ್ತು ಸಾಮಾಜಿಕ ಸೇವೆಗಾಗಿ ಅನೇಕ ಸಂಘ-ಸಂಸ್ಥೆಗಳು ಅವರನ್ನು ಸನ್ಮಾನಿಸಿದವು. ಅವರಿಗೆ ಸಂಗೀತ ರತ್ನ, ಸಂಗೀತ ಸಾಮ್ರಾಟ, ಲಲಿತಕಲಾ ಪಿತಾಮಹ ಇತ್ಯಾದಿ ಬಿರುದುಗಳು ಲಭಿಸಿದವು. ಹುಟ್ಟುಕುರುಡರಾದ ಅವರು ಸಂಗೀತಕ್ಕೆ ಕಣ್ಣಾಗಿ ಬಾಳಿದರು.

ಅವರು ತೀರಿಕೊಂಡ ಮೇಲೆ ಗದಗಿನಲ್ಲಿ ಅವರ ಸಮಾಧಿ ನಿರ್ಮಿಸಲಾಯಿತು. ಜನರು ಪ್ರತಿವರುಷ ಅವರ ಪುಣ್ಯತಿಥಿಯನ್ನು ಆಚರಿಸುತ್ತಾರೆ. ಆಗ ದೇಶದ ಮೂಲೆ ಮೂಲೆಗಳಿಂದ ಪ್ರಸಿದ್ಧ ಸಂಗೀತಗಾರರು ಬಂದು ಸಂಗೀತ ಸೇವೆ ಸಲ್ಲಿಸುತ್ತಾರೆ.

**ಶಬ್ದಗಳ ಅರ್ಥ :**

ಪರಿಣತ – ನಿಪುಣ ; ಮಧುರ – ಇಂಪಾದ ; ಮದ್ದಳೆ – ಮೃದಂಗ, ಮಮ್ಮಲ – ಹೆಚ್ಚು ಅಧಿಕ ;
ಕರಗತ – ಚೆನ್ನಾಗಿ ತಿಳಿದ ; ಅಂಧ – ಕುರುಡ

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ದಂಪತಿ – ................. ; ಗಾನ – ................. ; ವಿನಿಯೋಗ – ................. ;
ಸಲೀಸು – ................. ; ಪ್ರಾಶಸ್ತ್ಯ – ................. ; ಪುಣ್ಯತಿಥಿ – ...................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಗದಿಗಯ್ಯನವರ ತಂದೆ–ತಾಯಿಗಳು ಏಕೆ ದು:ಖಿತರಾದರು ?

ಉತ್ತರ ..........................................................................

ಆ) ಗುರುಪಾದಯ್ಯ ಮತ್ತು ಗಾನಯೋಗಿಗಳ ಬಾಲ್ಯದ ಸಂಗೀತ ಕಲೆ ಹೇಗಿತ್ತು ?

ಉತ್ತರ ..........................................................................

ಇ) ಪಂಚಾಕ್ಷರಿ ಗವಾಯಿ ಎಂಬ ಬಿರುದು ಬರಲು ಕಾರಣವೇನು ?

ಉತ್ತರ ..........................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..........................................................................

ಉತ್ತರ ..........................................................................

ಆ) ..........................................................................

ಉತ್ತರ ..........................................................................

**ಪ್ರಶ್ನೆ 3) ಚೌಕಟ್ಟಿನಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಯೋಗ್ಯವಾದುದನ್ನು ಆಯ್ದು ಬಿಟ್ಟಸ್ಥಳ ತುಂಬಿರಿ.**

1) ಗದಿಗಯ್ಯನವರು ಹುಟ್ಟಿದ ಜಿಲ್ಲೆ............... .

(ಗದಗ, ಹಾವೇರಿ, ಧಾರವಾಡ, ಬೆಳಗಾಂವ)

2) ಶಾಸ್ತ್ರೀಯ ಸಂಗೀತ ಕಲಿಯಲು ಹೋದ ಸ್ಥಳ ............... .

(ಮಿರಜ, ಹಾನಗಲ, ಶಿಗ್ಗಾಂವ, ಬಾಗಲಕೋಟ )

3) ಗದಿಗಯ್ಯನವರಿಗೆ ದುಃಖ ತಂದ ಸಂಗತಿ ............... .

(ತಂದೆಯ ಮರಣ, ಅಣ್ಣನ ಮರಣ, ತಾಯಿಯ ಮರಣ, ಗೆಳೆಯನ ಮರಣ)

**ಪ್ರಶ್ನೆ 4) ಕೆಳಗಿನ ವಾಕ್ಯಗಳನ್ನು ಕ್ರಮಬದ್ಧವಾಗಿ ಬರೆಯಿರಿ.**

1) ಪಂಚಾಕ್ಷರಿ ಗವಾಯಿಗಳು ಒಂದು ಸಂಗೀತ ಶಾಲೆಯನ್ನು ಪ್ರಾರಂಭಿಸಿದರು.

2) ಹುಟ್ಟು ಕುರುಡರಾದ ಅವರು ಸಂಗೀತಕ್ಕೆ ಕಣ್ಣಾಗಿ ಬಾಳಿದರು.

3) ಶ್ರೀ ಪಂಚಾಕ್ಷರಿ ಗವಾಯಿಗಳು ಗಾನಯೋಗಿಗಳೆಂದು ಪ್ರಸಿದ್ಧರಾದರು.

4) ಗುರುಪಾದಯ್ಯ, ಮಕ್ಕಳನ್ನು ನನಗೆ ಒಪ್ಪಿಸಿ ಬಿಡು.

**ಉಪಕ್ರಮ :** ಅಂಧಜನರ ಜೀವನ ಕುರಿತು ನಿಮ್ಮ ಅಭಿಪ್ರಾಯಗಳ್ನು ಬರೆಯಿರಿ.

...............................................................

...............................................................


...............................................................

...............................................................

...............................................................



# 7. ಶ್ಯಾಮನ ತಾಯಿ



''ಯಶೋದಕ್ಕಾ, ಶ್ಯಾಮನು ಇಂದು ಈಜಲಿಕ್ಕೆ ಬರುತ್ತಾನೆಯೇ ? ಎಲ್ಲಿದ್ದಾನೆ ಆತ ? '' ಎಂದನು ಬನ್ಯಾ.

''ಶ್ಯಾಮಾ, ಶ್ಯಾಮಾ, ಎಲ್ಲಿರುವೆಯೊ, '' ಎಂದು ತಾಯಿ ನನ್ನನ್ನು ಕೂಗಿದಳು.

ನಾನು ಭತ್ತದ ಕಣಜದ ಮರೆಯಲ್ಲಿ ಕುಳಿತಿದ್ದೆ. ಗೆಳೆಯರು ಬಂದು ನನ್ನನ್ನು ಎಳೆಯ ಹತ್ತಿದರು. ಅಮ್ಮ ಬಂದು ಎರಡೇಟು ಬಿಗಿದಳು.

''ಅಮ್ಮಾ ಹೊಡೆಯಬೇಡಾ, ಬೇಡಾ'' ಎಂದು ನಾನು ಚೀರಾಡತೊಡಗಿದೆ.

''ಏಳು, ನಡೆ ಇವರ ಜೊತೆಗೆ ಮೂರ್ಖಾ, ಅಡಗಿಕೊಂಡು ಕೂಡಲು ನಿನಗೆ ನಾಚಿಕೆಯಾಗುವುದಿಲ್ಲವೇ ?

ಎಂದಳು ತಾಯಿ. ಬನ್ಯಾ ಮತ್ತು ಬಾಳು ನನ್ನನ್ನು ಎಳೆದುಕೊಂಡು ಬಾವಿಯ ಕಡೆಗೆ ಒಯ್ದರು.

ನಾನೊಮ್ಮೆ ಬಾವಿಯಲ್ಲಿ ಹಣಕಿ ನೋಡಿದೆ. ಮತ್ತೆ ಹಿಂದೆ ಸರಿದೆ.

''ಅಂಜುಬುರುಕ ಶ್ಯಾಮ ! ತಡೆ, ವೇಣು .... ಮೊದಲು ನೀನು ಹಾರು. ಅಂದರೆ ಅವನಿಗೆ ಧೈರ್ಯ ಬರಬಹುದು,'' ಎಂದು ವೇಣುವಿನ ಅಣ್ಣ ಹೇಳಿದನು.

ವೇಣು ಬಾವಿಯಲ್ಲಿ ಜಿಗಿದನು. ಅಷ್ಟರಲ್ಲಿ ನನ್ನನ್ನು ಸಹ ಯಾರೋ ಹಿಂದಿನಿಂದ ನೂಕಿಬಿಟ್ಟರು.

ಬಾಳು ಕೂಡ ನೀರಿಗಿಳಿದನು. ನನ್ನ ಹೊಟ್ಟೆಯ ಕೆಳಗೆ ಕೈ ಹಾಕಿ ಈಜು ಕಲಿಸಹತ್ತಿದನು. ನಾನು ಈಜುಗಾಯಿ ಕಟ್ಟಿಕೊಂಡಿದ್ದೆ. ಅದು ಇದ್ದುದರಿಂದ ಮುಳುಗುವ ಭಯವಿರಲಿಲ್ಲ. ನಾನು ಮೈಚಳಿ ಬಿಟ್ಟು ಈಜಲು ಆರಂಭಿಸಿದೆ. ನಂತರ ನಾವೆಲ್ಲ ಮನೆಗೆ ಬಂದೆವು.

ಅಂದು ಮನೆಯಲ್ಲಿ ತುಸು ಮುನಿದುಕೊಂಡೇ ಇದ್ದೆ. ತಾಯಿ ಊಟಕ್ಕೆ ಕುಳಿತಿದ್ದಳು. '' ಆ ಮೊಸರಿನ ಕುಡಿಕೆಯಲ್ಲಿ ತುಸು ಮೊಸರಿದೆ. ನಿನಗೆ ಮೊಸರು ಎಂದರೆ ಪ್ರೀತಿ ಅಲ್ಲವೆ ? ತಿಂದು ಬಿಡು, '' ಎಂದಳು ತಾಯಿ.

''ನನಗೇನು ನಿನ್ನ ಮೊಸರು ಬೇಕಾಗಿಲ್ಲ. ಬೆಳಿಗ್ಗೆ ಏಟಿನ ಮೇಲೆ ಏಟು ಹಾಕಿದೆ. ಈಗ ಮೊಸರು ಕೊಡುತ್ತಾಳಂತೆ,'' ಎಂದು ನಾನು ಅಳುತ್ತ ಹೇಳಿದೆ.

ತಾಯಿಯ ಕಣ್ಣುಗಳು ತುಂಬಿ ಬಂದವು. ಅರ್ಧ ಊಟ ಮಾಡಿ ಎದ್ದು ಬಂದಳು. ತಾನು ಹೊಡೆದಲ್ಲೆಲ್ಲಾ ಪ್ರೀತಿಯಿಂದ ಮೈಯನ್ನು ಸವರಿದಳು.

ಅವಳ ಕಂಠ ತುಂಬಿ ಬಂದಿತು. ''ಶ್ಯಾಮಾ, ಜಗತ್ತು ನಿನಗೆ ಪುಕ್ಕನೆಂದು ಏಕೆ ಕರೆಯಬೇಕು ? ಯಾರಾದರೂ ' ನಿನ್ನ ತಾಯಿಗೆ, ನಿನ್ನ ಮಕ್ಕಳು ಹೇಡಿಗಳು' ಎಂದು ಕರೆದರೆ ನೀನು ಸಹಿಸುವೆಯಾ ? ನನ್ನ ಮಕ್ಕಳ ಅಪಮಾನವನ್ನು ನಾನು ಎಂದಿಗೂ ಸಹಿಸಿಕೊಳ್ಳುವುದಿಲ್ಲ, ನನ್ನ ಅಪಮಾನವನ್ನೂ ನನ್ನ ಮಕ್ಕಳು ಸಹಿಸಿಕೊಳ್ಳಬಾರದು. ಅಂದರೆ ಮಾತ್ರ ನಾನು ನಿಜವಾದ ತಾಯಿ, ಸಿಟ್ಟಾಗಬೇಡ ಮಗು. ಗಟ್ಟಿಗನಾಗಿ ಬಾಳು,'' ಎಂದಳು.

ಮಕ್ಕಳು ಶೂರರೂ, ಧೀರರೂ ಆಗಿರಬೇಕೆಂದು ನನ್ನ ತಾಯಿ ಯಾವಾಗಲೂ ಹೇಳುತ್ತಿದ್ದಳು.

**– ಸಾನೇ ಗುರೂಜಿ**

### ಶಬ್ದಗಳ ಅರ್ಥ :

ಕಣಜ – ಧಾನ್ಯ ಸಂಗ್ರಹಿಸುವ ಸ್ಥಳ ; ಹಣಕಿ ಹಾಕು – ಇಣಕಿ ನೋಡು ; ಹೇಡಿ – ಅಂಜುಬುರುಕ ;
ಮೈಚಳಿಬಿಡು – ಹೆದರಿಕೆ ಬಿಡು ; ಮುನಿಸು – ಸಿಟ್ಟುಗೊಳ್ಳು.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.
  ನೂಕು – ................ ; ಈಜುಗಾಯಿ – ................ ; ಕುಡಿಕೆ – ................. ;

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಶ್ಯಾಮನು ಅಡಗಿಕೊಂಡು ಎಲ್ಲಿ ಕುಳಿತಿದ್ದನು ?

ಉತ್ತರ ..........................................................................................

ಆ) ಶ್ಯಾಮನಿಗೆ ಯಾರು ಈಜು ಕಲಿಸಿದರು?

ಉತ್ತರ ..........................................................................................

ಇ) ಶ್ಯಾಮನಿಗೆ ನೀರಿನಲ್ಲಿ ಮುಳುಗುವ ಭಯ ಏಕೆ ಇರಲಿಲ್ಲ ?

ಉತ್ತರ ..........................................................................................

ಈ) ಶ್ಯಾಮನ ತಾಯಿ ಏನು ಹೇಳುತ್ತಿದ್ದಳು ?

ಉತ್ತರ ..........................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಮೂರು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..........................................................................

ಉತ್ತರ ..........................................................................

ಆ) ..........................................................................

ಉತ್ತರ ..........................................................................

ಇ) ..........................................................................

ಉತ್ತರ ..........................................................................

**ಪ್ರಶ್ನೆ 3) ಕೆಳಗಿನ ಪರಿಚ್ಛೇದದಲ್ಲಿಯ ಸರ್ವನಾಮಗಳನ್ನು ಆಯ್ದು ಬರೆಯಿರಿ.**

ಬಾಳು ಕೂಡ ನೀರಿಗಿಳಿದನು. ಹೊಟ್ಟೆಯ ಕೆಳಗೆ ಕೈ ಹಾಕಿ ಈಜು ಕಲಿಸ ಹತ್ತಿದನು. ನಾನು ಈಜುಗಾಯಿ ಕಟ್ಟಿಕೊಂಡಿದ್ದೆ. ಅದು ಇದ್ದುದರಿಂದ ಮುಳುಗುವ ಭಯವಿರಲಿಲ್ಲ. ನಾನು ಮೈಚಳಿ ಬಿಟ್ಟು ಈಜಲು ಆರಂಭಿಸಿದೆ. ನಂತರ ನಾವೆಲ್ಲ ಮನೆಗೆ ಬಂದೆವು.

.............................. ..............................

.............................. ..............................

.............................. ..............................

**ಪ್ರಶ್ನೆ 4) ಕೆಳಗಿನ ಕೊಟ್ಟ ಅಕ್ಷರ ಸಮೂಹದಿಂದ ಅರ್ಥಪೂರ್ಣ ಶಬ್ದ ರಚಿಸಿರಿ.**

ನಮಾಅಪ ಜಣಕ ರುಮೊಸ ಕೆನಾಚಿ

**ಪ್ರಶ್ನೆ 5) ಕೆಳಗಿನ ವಾಕ್ಯದಲ್ಲಿ ಯೋಗ್ಯ ವಿರಾಮ ಚಿಹ್ನೆಗಳನ್ನು ಬಳಸಿ ವಾಕ್ಯವನ್ನು ಪುನ: ಬರೆಯಿರಿ.**

ನನಗೇನು ಮೊಸರು ಬೇಕಾಗಿಲ್ಲ. ಬೆಳಿಗ್ಗೆ ಏಟಿನ ಮೇಲೆ ಏಟು ಹಾಕಿದೆ. ಈಗ ಮೊಸರು ಕೊಡುತ್ತಾಳಂತೆ ಎಂದು ಅಳುತ್ತ ಹೇಳಿದೆ.

**ಉಪಕ್ರಮ :** ನಿಮ್ಮ ಬಾಲ್ಯದ ನೆನಪುಗಳನ್ನು ಕುರಿತು ಐದಾರು ಸಾಲು ಬರೆಯಿರಿ.

# 1. ಯಾವುದು ಇಷ್ಟ




**ಗುರುಗಳು** : ಹೇಳೆ ಗಂಗಾ, ಹೇಳೆ ಗಂಗಾ
ಯಾವ ಕಾಲವು ಇಷ್ಟ ?
ನಿನಗೆ ಯಾವ ಕಾಲವು ಇಷ್ಟ ?

**ಗಂಗಾ** : ದಿನವಿಡೀ ಆಡಲು ನೀರನು ಸುರಿಸುವ
ಪೇಟೆಗೆ ಹೋಗಲು ಕೊಡೆಯನು ಹಿಡಿಸುವ
ಮಳೆಗಾಲವೆ ಇಷ್ಟ
ನನಗೆ ಮಳೆಗಾಲವೆ ಇಷ್ಟ

| | | |
|---|---|---|
| **ಗುರುಗಳು** | : | ಹೇಳೆ ತುಂಗಾ, ಹೇಳೆ ತುಂಗಾ<br>ಯಾವ ಕಾಲವು ಇಷ್ಟ ?<br>ನಿನಗೆ ಯಾವ ಕಾಲವು ಇಷ್ಟ ? |
| **ತುಂಗಾ** | : | ಬೆಚ್ಚನೆ ಬಟ್ಟೆಯ ತೊಡಿಸಲು ಬರುವ<br>ಬಿಸಿ ಬಿಸಿ ಬೆಳಸಿಯ ತಿನ್ನಲು ಬರುವ<br>ಚಳಿಗಾಲವೆ ಇಷ್ಟ<br>ನನಗೆ ಚಳಿಗಾಲವೆ ಇಷ್ಟ |
| **ಗುರುಗಳು** | : | ಹೇಳೊ ರಂಗಾ ಹೇಳೊ ರಂಗಾ<br>ಯಾವ ಕಾಲವು ಇಷ್ಟ ?<br>ನಿನಗೆ ಯಾವ ಕಾಲವು ಇಷ್ಟ ? |
| **ರಂಗಾ** | : | ನೇರಲ, ಮಾವಿನ ಹಣ್ಣನು ಕೊಡುವ<br>ಆಟಕೆ ನಮಗೆ ಬಿಡುವನು ತರುವ<br>ಬೇಸಿಗೆ ಕಾಲವೆ ಇಷ್ಟ<br>ನನಗೆ ಬೇಸಿಗೆ ಕಾಲವೆ ಇಷ್ಟ |



| | | |
|---|---|---|
| **ಮಕ್ಕಳು** | : | ಹೇಳಿರಿ ಗುರುಗಳೆ, ಹೇಳಿರಿ ಗುರುಗಳೆ<br>ಯಾವ ಕಾಲವು ಇಷ್ಟ ?<br>ನಿಮಗೆ ಯಾವ ಕಾಲವು ಇಷ್ಟ ? |
| **ಗುರುಗಳು** | : | ಆಟಕೆ ಊಟಕೆ ನೀರನು ಕೊಡುವ<br>ಬೆಚ್ಚನೆ ಉಡುಗೆ ತೊಡಿಸಲು ಬರುವ<br>ತಿನ್ನಲು ಸವಿ ಸವಿ ಹಣ್ಣನು ತರುವ<br>ಮೂರು ಕಾಲಗಳಿಷ್ಟ<br>ನನಗೆ ಮೂರು ಕಾಲಗಳಿಷ್ಟ |



**ಶಬ್ದಗಳ ಅರ್ಥ :**

ಇಷ್ಟ – ಪ್ರೀಯವಾದ ;  ಪೇಟೆ – ಮಾರುಕಟ್ಟೆ ;  ಬೆಳಸಿ – ರಸ ತುಂಬಿದ ಕಾಳು, ಎಳೆಯ ಕಾಳು.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.
  ಸುರಿಸು – ................ ;  ಕೊಡೆ – ................ ;  ಸವಿ – .................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ಕೊಡೆಯು ಯಾವ ಕಾಲವನ್ನು ನೆನಪಿಸುತ್ತದೆ ?

ಉತ್ತರ ..............................................................................

ಆ) ಬೆಳಸಿ ಸಿಗುವ ಕಾಲ ಯಾವುದು ?

ಉತ್ತರ ..............................................................................

ಇ) ಬೇಸಿಗೆ ಕಾಲದಲ್ಲಿ ದೊರೆಯುವ ಹಣ್ಣುಗಳಾವವು ?

ಉತ್ತರ ..............................................................................

ಈ) ಗುರುಗಳಿಗೆ ಇಷ್ಟವಾದ ಕಾಲಗಳು ಯಾವುವು?

ಉತ್ತರ ..............................................................................

**ಪ್ರಶ್ನೆ 2) ಬರುವ – ತರುವ ಈ ಉದಾಹರಣೆಯಂತಿರುವ ಅಂತ್ಯಪ್ರಾಸದ ಜೋಡಿಗಳನ್ನು ಬರೆಯಿರಿ.**

**ಪ್ರಶ್ನೆ 3) ಮಳೆಗಾಲದಲ್ಲಿ ನಿಮಗೆ ಬಂದ ಸವಿ ಅನುಭವಗಳನ್ನು ಬರೆಯಿರಿ.**

..............................................................................

..............................................................................

..............................................................................

..............................................................................

**ಪ್ರಶ್ನೆ 4) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

| ಮಳೆಗಾಲದಲ್ಲಿ ಧರಿಸುವ ಉಡುಪುಗಳು | ಚಳಿಗಾಲದಲ್ಲಿ ಧರಿಸುವ ಉಡುಪುಗಳು | ಬೇಸಿಗೆ ಕಾಲದಲ್ಲಿ ಧರಿಸುವ ಉಡುಪುಗಳು |
|---|---|---|
| | | |

**ಉಪಕ್ರಮ :** ಬೇಸಿಗೆ ಕಾಲದಲ್ಲಿ ಅರಳುವ ಹೂವುಗಳ ಹೆಸರುಗಳನ್ನು ಬರೆಯಿರಿ.

# 2. ಇಳೆಗೆ ಬಂತು ಮಳೆ



ಗುಡು ಗುಡು ಗುಡುಗುಡು
ಗುಡುಗಲು ಮುಗಿಲು
ಥಕಥಕ ಥಕಥಕ
ಕುಣಿವುದು ನವಿಲು

ದಳದಳ ದಳದಳ
ಸುರಿಯಲು ಮಳೆಯು
ಜುಳು ಜುಳು ಜುಳು ಜುಳು
ಹರಿವುದು ಹೊಳೆಯು

ಚಳಚಳ ಚಳಚಳ
ಬೀಳಲು ಬಿಸಿಲು
ಫಳಫಳ ಫಳಫಳ
ಹೊಳೆವುದು ಫಸಲು

ಸುಳುಸುಳು ಸುಳುಸುಳು
ಸೂಸಲು ಗಾಳಿ
ಬಿರಿದಾ ಕುಸುಮಕೆ
ದುಂಬಿಯ ದಾಳಿ

ಬಾನಲಿ ಮೂಡಲು
ಕಾಮನ ಬಿಲ್ಲು
ಚಿಣ್ಣರ ಲೋಕದಿ
ಹರಡಿತು ಗುಲ್ಲು

ತೊಳೆಯಿತು ಒಡನೆ
ಊರಿನ ಕೊಳೆಯು
ಹೆಚ್ಚಿತು ಆಗಲೆ
ಭೂಮಿಯ ಕಳೆಯು

**- ಪ. ಗು. ಸಿದ್ದಾಪುರ**

**ಶಬ್ದಗಳ ಅರ್ಥ :**

ಒಡನೆ – ತಕ್ಷಣ ; ಕಳೆ – ಕಾಂತಿ ; ಇಳೆ – ಭೂಮಿ.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಬರೆಯಿರಿ.

ಕುಸುಮ – ................ ; ಫಸಲು – ................ ; ದಾಳಿ – ................

**ಅಭ್ಯಾಸ**

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ನವಿಲು ಹೇಗೆ ಕುಣಿಯುವುದು ?

ಉತ್ತರ ................................................................................

ಆ) ಗುಡುಗುಡು ಎಂದು ಯಾವುದು ಗುಡುಗುವುದು ?

ಉತ್ತರ ..................................................................................

ಇ) ಭೂಮಿಯ ಕಳೆಯು ಯಾವಾಗ ಹೆಚ್ಚುವುದು ?

ಉತ್ತರ ..................................................................................

ಈ) ದುಂಬಿಯು ಯಾರಿಗೆ ದಾಳಿ ಇಡುವುದು ?

ಉತ್ತರ ..................................................................................

**ಪ್ರಶ್ನೆ 2) ''ಅ'' ಪಟ್ಟಿಯಲ್ಲಿರುವ ಪದಗಳನ್ನು ''ಬ'' ಪಟ್ಟಿಯಲ್ಲಿರುವ ಪದಗಳೊಂದಿಗೆ ಹೊಂದಿಸಿ ಬರೆಯಿರಿ.**

| ''ಅ'' ಪಟ್ಟಿ | | ''ಬ'' ಪಟ್ಟಿ |
|---|---|---|
| 1) ಫಸಲು | | ಅ) ಸುಳುಸುಳು |
| 2) ಹೊಳೆಯು | | ಆ) ಚಳಚಳ |
| 3) ಬಿಸಿಲು | | ಇ) ಫಳಫಳ |
| 4) ಗಾಳಿ | | ಈ) ಜುಳಜುಳು |

**ಪ್ರಶ್ನೆ 3) ಹೊಳೆ ಶಬ್ದದ ಬೇರೆ ಬೇರೆ ಅರ್ಥಗಳನ್ನು ಬರೆದು, ಸ್ವಂತ ವಾಕ್ಯ ರಚಿಸಿರಿ.**

..................................................................................

..................................................................................


**ಪ್ರಶ್ನೆ 4) ಅಂತ್ಯಪ್ರಾಸದ ಜೋಡಿಗಳನ್ನು ಉದಾಹರಣೆಯಲ್ಲಿ ತೋರಿಸಿದಂತೆ ಕವಿತೆಯಿಂದ ಆರಿಸಿ ಬರೆಯಿರಿ.**

**ಉದಾ :** ಮುಗಿಲು – ನವಿಲು

**ಉಪಕ್ರಮ :** ಮಳೆಗಾಲದ ವೈಭವವನ್ನೂ ನಿಮ್ಮ ಮಾತುಗಳಲ್ಲಿ ವರ್ಣಿಸಿ 8–10 ಸಾಲುಗಳಲ್ಲಿ ಬರೆಯಿರಿ.

## ನವಿಲಿನ ನರ್ತನ ಆನಂದದ ಕ್ಷಣ

# 3. ಕಾಡು



ಬನ್ನಿರಿ ಬಾಲರೆ
ಕಾಡನು ಬೆಳೆಸಿ
ನಾಡನು ಉಳಿಸೋಣ

ಬಂಜರು ಭೂಮಿಗೆ
ಹಸಿರಿನ ಹಚ್ಚಡ
ಹೊದ್ದಿಸಿ ನಲಿಯೋಣ

ಸಸಿಗಳ ನೆಟ್ಟು
ನೀರನು ಎರೆದು
ಮರಗಳ ಬೆಳೆಸೋಣ

ಮರದಡಿ ಕುಳಿತು
ನೆರಳನು ಪಡೆದು
ಮನವನು ತಣಿಸೋಣ

ಮರದಡಿ ಉದುರುವ
ಹಣ್ಣನು ಆಯ್ದು
ಮುದದಲಿ ಸವಿಯೋಣ

ಮೋಡವ ತಡೆದು
ಮಳೆಯನು ಸುರಿಸುವ
ಕಾಡಿಗೆ ನಮಿಸೋಣ

ಹಸಿರನು ಕಾಣುತ
ದಣಿದಿಹ ಕಣ್ಣಿಗೆ
ತಂಪನು ಪಡೆಯೋಣ

ಕಾಡಿನ ಕೃಪೆಯ
ಎಲ್ಲೆಡೆ ಸಾರುತ
ನಾಡನು ಬೆಳೆಸೋಣ

ಕಾಡಿದ್ದರೆ ನಾಡು
ಎನ್ನುವ ಮಂತ್ರವ
ಒಟ್ಟಿಗೆ ಪಠಿಸೋಣ

**- ಬಿ. ತಿಪ್ಪೇರುದ್ರಪ್ಪ**

**ಶಬ್ದಗಳ ಅರ್ಥ :**

ಬಂಜರು – ಏನೂ ಬೆಳೆಯದ ಭೂಮಿ ; ಹಚ್ಚಡ – ಹೊದಿಕೆ ; ಮುದ – ಸಂತೋಷ ;

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ತಣಿಸು – ................ ; ಕೃಪೆ – ................ ; ಪಠಿಸು – ................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ನಾಡನ್ನು ಉಳಿಸಲು ಏನು ಮಾಡಬೇಕು ?

ಉತ್ತರ ..........................................................................

ಆ) ಮರಗಳನ್ನು ಹೇಗೆ ಬೆಳೆಸಬೇಕು ?

ಉತ್ತರ ..........................................................................

ಇ) ಕಾಡಿಗೆ ಏಕೆ ನಮಿಸಬೇಕು ?

ಉತ್ತರ ..........................................................................

ಈ) ನಾವು ಯಾವ ಮಂತ್ರವನ್ನು ಪಠಿಸಬೇಕು ?

ಉತ್ತರ ..........................................................................

**ಪ್ರಶ್ನೆ 2) ಕವಿತೆಯನ್ನು ಓದಿ ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಮೂರು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..........................................................................

ಉತ್ತರ ..........................................................................

ಆ) ..........................................................................

ಉತ್ತರ ..........................................................................

**ಪ್ರಶ್ನೆ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಮರಗಳಿಂದ ನಮಗೆ ಏನೇನು ದೊರೆಯುವವು ?

ಉತ್ತರ ..........................................................................

..........................................................................

ಆ) ನಿಮಗೆ ಪರಿಚಯವಿರುವ ಐದು ಮರಗಳ ಹೆಸರುಗಳನ್ನು ಬರೆಯಿರಿ.

ಉತ್ತರ ..........................................................................

..........................................................................

**ಪ್ರಶ್ನೆ 4) ಕವಿತೆಯ ಕೆಳಗಿನ ಸಾಲುಗಳನ್ನು ಪೂರ್ಣಗೊಳಿಸಿರಿ.**

ಬಂಜರು ಭೂಮಿಗೆ

..............................

...........ನಲಿಯೋಣ.


**ಉಪಕ್ರಮ :** ಕಾಡಿನಲ್ಲಿ ಬೆಳೆಯುವ ವಿವಿಧ ಪ್ರಕಾರದ ಗಿಡ-ಮರಗಳನ್ನು ಹೆಸರಿಸಿರಿ.

_______________ _______________ _______________ _______________

_______________ _______________ _______________ _______________

_______________ _______________ _______________ _______________

# 4. ಯಾರು ನಮ್ಮ ದೇವರು ?



ದೇವರಂತೆ ದೇವರು !
ಯಾರು ನಮ್ಮ ದೇವರು ?
ಹೆತ್ತ ತಾಯಿ ದೇವರು,
ಹೆತ್ತ ತಂದೆ ದೇವರು,
ನಮ್ಮ ಗುರು ದೇವರು,
ಮುದ್ದು ಕಂದ ದೇವರು.

ದೇವರಂತೆ ದೇವರು !
ಯಾರು ನಮ್ಮ ದೇವರು ?
ಬೆಳಗೊ ಸೂರ್ಯ ದೇವರು,
ಹರಿವ ನೀರು ದೇವರು,
ಚಲಿಪ ಗಾಳಿ ದೇವರು,
ಬೆಳೆವ ಭೂಮಿ ದೇವರು.

ದೇವರಂತೆ ದೇವರು !
ಯಾರು ನಮ್ಮ ದೇವರು ?
ಹಸಿರು ಹಾಸು ದೇವರು,
ನಗುವ ಹೂವು ದೇವರು,
ಪ್ರಾಣಿ ಪಕ್ಷಿ ದೇವರು,
ಪ್ರಕೃತಿ ಸೊಬಗು ದೇವರು.

ದೇವರಂತೆ ದೇವರು !
ಯಾರು ನಮ್ಮ ದೇವರು ?
ಸತ್ಯವಾಣಿ ದೇವರು,
ತ್ಯಾಗ ಮೂರ್ತಿ ದೇವರು,
ಸ್ವಾರ್ಥರಹಿತ ದೇವರು,
ಪ್ರೇಮ ಹೃದಯಿ ದೇವರು.

**ಆರ್ ಸರಸ್ವತಿ**

**ಶಬ್ದಗಳ ಅರ್ಥ :**

ಹೆತ್ತ – ಜನ್ಮಕೊಟ್ಟ ; ಕಂದ – ಕೂಸು ; ಚಲಿಪ – ಚಲಿಸುವ

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಪ್ರಕೃತಿ– ................ ; ಸೊಬಗು – ................ ; ವಾಣಿ – ................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಯಾವ ವಾಣಿಗೆ ದೇವರು ಎಂದು ಹೇಳಲಾಗಿದೆ ?

ಉತ್ತರ ......................................................................................

......................................................................................

ಆ) ಸೊಬಗನ್ನು ಯಾವುದಕ್ಕೆ ಹೋಲಿಸಿದ್ದಾರೆ ?

ಉತ್ತರ ......................................................................................

......................................................................................

ಇ) ದೇವರು ಎಂಥ ಹೃದಯಿ ?

ಉತ್ತರ ......................................................................................

......................................................................................

**ಪ್ರಶ್ನೆ 2) ಕವಿತೆಯ ಸಾಲುಗಳನ್ನು ಪೂರ್ಣಮಾಡಿರಿ.**

ದೇವರಂತೆ ದೇವರು !

........................

........................

........................

........................

............. ಕಂದ ದೇವರು.

**ಪ್ರಶ್ನೆ 3) ಕೆಳಗಿನ ಶಬ್ದಗಳಿಗೆ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.**

ನಗು X ............ ; ಸತ್ಯ X ............ ; ಸ್ವಾರ್ಥ X ............

**ಪ್ರಶ್ನೆ 4) 'ಅ' ಪಟ್ಟಿಯಲ್ಲಿಯ ಶಬ್ದಗಳನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | | 'ಬ' ಪಟ್ಟಿ |
|---|---|---|
| 1) ಹಸಿರು | | (ಅ) ಸೂರ್ಯ |
| 2) ಚಲಿಸುವ | | (ಆ) ನೀರು |
| 3) ಹರಿವ | | (ಇ) ಹಾಸು |
| 4) ನಗುವ | | (ಈ) ವಾಣಿ |
| 5) ಬೆಳೆವ | | (ಉ) ಗಾಳಿ |
| 6) ಬೆಳಗೊ | | (ಊ) ಹೂವು |
| 7) ಸತ್ಯ | | (ಎ) ಭೂಮಿ |

**ಉಪಕ್ರಮ :** ನಿಮ್ಮ ಸಮೀಪದ ವೃದ್ಧಾಶ್ರಮಕ್ಕೆ ಭೇಟಿಕೊಟ್ಟು ಮಾಹಿತಿ ಸಂಗ್ರಹಿಸಿರಿ.

# ವ್ಯಾಕರಣ ವಿಭಾಗ

## ಕ್ರಿಯಾಪದಗಳು

**ಬನ್ನಿರಿ ನಾವು ತಿಳಿದು ಕೊಳ್ಳೋಣ**

ಕ್ರಿಯೆಯ ಅಥವಾ ಕೆಲಸದ ಅರ್ಥವನ್ನು ಕೊಡುವ ಪದಗಳು 'ಕ್ರಿಯಾಪದ' ಗಳೆನಿಸುವವು. ಕ್ರಿಯಾಪದವು ಕರ್ತೃವಿನ ಕಾರ್ಯದ ಬಗ್ಗೆ ಹೇಳುವದು.

**ಉದಾ :** ನಾಯಿಯು ಓಡುತ್ತದೆ.
ಗಿಳಿಯು ಹಣ್ಣನ್ನು ತಿಂದಿತು.
ನಾವು ಹಾಡು ಕೇಳುವೆವು.

ಮೇಲಿನ ವಾಕ್ಯಗಳಲ್ಲಿ ಓಡುತ್ತದೆ, ತಿಂದಿತು, ಕೇಳುವೆವು ಎಂಬ ಕ್ರಿಯಾಪದಗಳು ಓಡು, ತಿನ್ನು, ಕೇಳು ಎಂಬ ಮೂಲ ಶಬ್ದಗಳಿಂದ ಉಂಟಾಗಿವೆ.

ಈ ಮೂಲ ಶಬ್ದಗಳಿಗೆ 'ಧಾತುಗಳು' ಎನ್ನುವರು. ಧಾತುಗಳಿಗೆ ಆಖ್ಯಾತ ಪ್ರತ್ಯಯಗಳು ಸೇರಿದಾಗ 'ಕ್ರಿಯಾಪದ'ಗಳಾಗುವವು.

## ಕ್ರಿಯಾವಿಶೇಷಣ

ಕ್ರಿಯೆ, ರೀತಿ, ಕಾಲ, ಸ್ಥಳ ಮೊದಲಾದವುಗಳನ್ನು ಸೂಚಿಸಿ ಕ್ರಿಯಾಪದಗಳನ್ನು ವರ್ಣಿಸುವ ಶಬ್ದಗಳಿಗೆ 'ಕ್ರಿಯಾವಿಶೇಷಣ'ಗಳೆನ್ನುವರು.

**ಉದಾ :** ಮಕ್ಕಳು ಚೆನ್ನಾಗಿ ಆಡುತ್ತಾರೆ.
ಗಾಳಿಯು ಸುಯ್ಯನೆ ಬೀಸುತ್ತಿದೆ.
ಇಲ್ಲಿ ಚೆನ್ನಾಗಿ, ಸುಯ್ಯನೆ ಎಂಬ ಪದಗಳು – ಕ್ರಿಯೆಯನ್ನು ವರ್ಣಿಸಿರುವದರಿಂದ 'ಕ್ರಿಯಾವಿಶೇಷಣ'ಗಳೆನಿಸುತ್ತವೆ.

## ಕಾಲಗಳು

ಕ್ರಿಯೆ ನಡೆದ, ನಡೆಯುತ್ತಿರುವ ಅಥವಾ – ಮುಂದೆ ನಡೆಯುವ ಅಂಶವನ್ನು ತಿಳಿಸುವುದಕ್ಕೆ 'ಕಾಲ'ಗಳು ಎನ್ನುವರು.

ಕಾಲಗಳಲ್ಲಿ ಮೂರು ಪ್ರಕಾರಗಳು

1) ಭೂತಕಾಲ
2) ವರ್ತಮಾನ ಕಾಲ
3) ಭವಿಷ್ಯತ್‌ಕಾಲ

1) ಭೂತಕಾಲ –

ನಡೆದುಹೋದ(ಆಗಿಹೋದ) ಕ್ರಿಯೆಯನ್ನು ಸೂಚಿಸುವುದಕ್ಕೆ 'ಭೂತಕಾಲ' ಎನ್ನವರು.

**ಉದಾ:** ಗಿಳಿಯು ಹಣ್ಣನ್ನು ತಿಂದಿತು.

ಗಿರಿಜೆಯು ಪತ್ರವನ್ನು ಬರೆದಳು.

2) ವರ್ತಮಾನಕಾಲ :

ಈಗ ನಡೆಯುತ್ತಿರುವ ಕ್ರಿಯೆಯನ್ನು ಸೂಚಿಸುವುದಕ್ಕೆ 'ವರ್ತಮಾನಕಾಲ' ಎನ್ನುವರು.

**ಉದಾ :** ವಿಜಯನು ಊಟವನ್ನು ಮಾಡುತ್ತಿದ್ದಾನೆ.

ಗಾಯತ್ರಿಯು ಪತ್ರವನ್ನು ಬರೆಯುತ್ತಿದ್ದಾಳೆ.

3) ಭವಿಷ್ಯತ್‌ಕಾಲ :

– ಕ್ರಿಯೆ ಮುಂದೆ ನಡೆಯಲಿದೆ ಎಂದು ಹೇಳುವುದಕ್ಕೆ 'ಭವಿಷ್ಯತ್‌ಕಾಲ' ಎನ್ನುವರು.

**ಉದಾ :** ನಾನು ನಾಳೆ ಊರಿಗೆ ಹೋಗುವವನಿದ್ದೇನೆ.

ನಾವು ಮುಂದಿನ ವಾರ ಡಾ. ಎಸ್ ರಾಧಾಕೃಷ್ಣನ್‌ರವರ ಜಯಂತಿಯನ್ನು ಆಚರಿಸುವವರಿದ್ದೇವೆ.

## ವಿಭಕ್ತಿ ಪ್ರತ್ಯಯಗಳು

ನಾಮಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆ ಬೇರೆ ಅರ್ಥವನ್ನು ಉಂಟುಮಾಡುವ ಪ್ರತ್ಯಯಗಳಿಗೆ 'ವಿಭಕ್ತಿ ಪ್ರತ್ಯಯ' ಎಂದು ಹೆಸರು. ವಿಭಕ್ತಿಪ್ರತ್ಯಯಗಳಲ್ಲಿ ಒಟ್ಟು 8 ಪ್ರಕಾರಗಳಿದ್ದು ಅವುಗಳ ಪ್ರತ್ಯಯ ಹಾಗೂ ಉದಾಹರಣೆಗಳು ಈ ಕೆಳಗಿನಂತಿವೆ.

| ವಿಭಕ್ತಿ | ಪ್ರತ್ಯಯ | ಉದಾಹರಣೆ |
|---|---|---|
| ಪ್ರಥಮಾ | ಉ | ಭೀಮನು |
| ದ್ವಿತೀಯಾ | ಅನ್ನು | ಭೀಮನನ್ನು |
| ತೃತೀಯಾ | ಇಂದ | ಭೀಮನಿಂದ |
| ಚತುರ್ಥಿ | ಗೆ, ಇಗೆ, ಅಕ್ಕೆ | ಭೀಮನಿಗೆ |
| ಪಂಚಮಿ | ದೆಸೆಯಿಂದ | ಭೀಮನ ದೆಸೆಯಿಂದ |
| ಷಷ್ಠೀ | ಅ | ಭೀಮನ |
| ಸಪ್ತಮಿ | ಅಲ್ಲಿ | ಭೀಮನಲ್ಲಿ |
| ಸಂಬೋಧನೆ | ಏ,ಇರಾ | ಭೀಮನೇ |





ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ – 411004.

कन्नड सुगमभारती इ. ७ वी

₹ 27.00